www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 8 ಆಗಸ್ಟ್ 2013
Volume : IX Issue : VIII August 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ವಯಸ್ಕರ ಸ್ವರ
3. ಪ್ರಾರ್ಥನಾ ಮನವಿಗಳು
4. ಪ್ರಶ್ನೋತ್ತರಗಳ ಸ್ವರ
5. ಸ್ಥಳೀಯ ಮತ್ತು ವಿದೇಶ ಸುದ್ದಿ
6. ಪ್ರಾರ್ಥನಾ ಸ್ವರ
7. ಅನಾಥರ ಸ್ವರ
8. ದೇವರು ಅದ್ಭುತ ಮಾಡುವನು
9. ಯೌವನಸ್ಥರ ಸ್ವರ – ಪವಿತ್ರಾತ್ಮನೊಂದಿಗೆ ನಡೆ
10 ಸ್ವತಂತ್ರವಾಗಿ ಜೀವಿಸಲೆಂದು ಕರೆದ ದೇವರು
11. ಹೇಳಿಕೆಗಳು
12. ಮಹಿಳೆಯರ ಸ್ವರ
13. ಆರೋಗ್ಯ ಸ್ವರ
14. ಜಾಹೀರಾತು
15. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು. ಕರ್ತನಾದ ಯೇಸುಕ್ರಿಸ್ತನು ಈ ಲೋಕದಲ್ಲಿ ಎಲ್ಲರನ್ನೂ ಪ್ರೀತಿಸುತ್ತಾನೆ. ವಿಶೇಷವಾಗಿ ಪಾಪಿಗಳಲ್ಲಿ ಅತೀ ಪಾಪಿಯಾದವರನ್ನು ಪ್ರೀತಿಸುತ್ತಾನೆ. ಇಂದು ಫರಿಸಾಯರ ಮತ್ತು ಸದ್ದುಕಾಯರ ಆತ್ಮ ಅನೇಕ ಸಭೆಗಳಲ್ಲಿ ಕ್ರಿಯೇ ಮಾಡುವ ನಿಮಿತ್ತ ಎಷ್ಟೋ ಜನರು ರಕ್ಷಣೆ ಹೊಂದಲು ಸಾಧ್ಯವಾಗುತ್ತಿಲ್ಲ. ಯೇಸು ಈ ಲೋಕಕ್ಕೆ ಬಂದಾಗ ವ್ಯಭಿಚಾರಿಗಳು, ಸುಂಕದವರು, ಸುಲಿಗೆಕೋರರು, ರಕ್ಷಣೆಹೊಂದಿದರು. ನಾವು ಪಾಪಿಗಳನ್ನು ನೋಡಿ ಅಸಹ್ಯಪಟ್ಟು ಅವರಿಂದ ದೂರ ಹೋಗಬಾರದು. ಅವರಿಗೆ ಪ್ರೀತಿ ತೋರಿಸಿ, ಸುವಾರ್ತೆ ಹೇಳಿ ಕರ್ತನಾದ ಯೇಸುಕ್ರಿಸ್ತನ ಮಾರ್ಗದಲ್ಲಿ ನಡೆಸಬೇಕು. ಇಂದು ದೇವರು ನಮ್ಮಲ್ಲಿ ಎದುರು ನೋಡುವಂತದ್ದು ಇದೇ ಆಗಿದೆ. ಅದಕ್ಕಾಗಿ ನಮ್ಮಲ್ಲಿ ಆತ್ಮಭಾರ ಬರಬೇಕಾಗಿದೆ. ಆತ್ಮಭಾರ ಇಲ್ಲದೆ, ನಾವು ಆತ್ಮಗಳಗಾಗಿ ಪ್ರಾರ್ಥಿಸಲು ಸುವಾರ್ತೆ ಸಾರಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ನಮ್ಮಲ್ಲಿ ಆತ್ಮಭಾರ ಇಲ್ಲದಿದ್ದರೆ ಆತ್ಮಭಾರಕ್ಕಾಗಿ ಪ್ರಾರ್ಥಿಸೋಣ. ದೇವರೇ ನನಗೆ ಆತ್ಮಭಾರ ಕೊಡು ಎಂದು ಆತ್ಮಗಳ ರಕ್ಷಣೆಗಾಗಿ ನಮ್ಮಲ್ಲಿರುವ ಹಣ, ವಸ್ತು, ಸಮಯ, ಆರೋಗ್ಯ, ಬಲ, ತ್ಯಾಗ ಮಾಡಲು ಸಿದ್ಧರಾಗೋಣ. ಆತ್ಮಗಳ ರಕ್ಷಣೆಗಾಗಿ ಏನಾದರೂ ಸಹಿಸಲು ಸಿಕ್ಕಿದರೆ ಸಂತೋಷದಿಂದ ಸಹಿಸಿಕೊಂಡು ಸೇವೆ ಮಾಡೋಣ. ಅಂದು ಎಸ್ತೇರಳು ರಾಜನನ್ನು ನೋಡಿ ನನ್ನ ಜನರಿಗೆ ಕೇಡು ಸಂಭವಿಸುವುದನ್ನು ನೋಡಿ ನಾನು ಸಹಿಸುವುದು ಹೇಗೆ ನನ್ನ ಕುಲ ನಾಶನವನ್ನು ನೋಡುತ್ತಾ ಸುಮ್ಮನಿರುವುದು ಹೇಗೆ ಎಂದು ಭಿನ್ನವಿಸಿದಳು (ಎಸ್ತೇ. 8:6). ಹೌದು ಪ್ರಿಯರೇ, ಜನರು ನಾಶವಾಗುವುದನ್ನು ನಮ್ಮಿಂದ ನೋಡಲು ಸಾಧ್ಯವಿಲ್ಲ. ಆತ್ಮಗಳ ರಕ್ಷಣೆಗಾಗಿ ನಾವು ಏನಾದರೂ ಮಾಡಬೇಕು. ಎಸ್ತೇರಳೇ, ನೆಹೆಮೀಯನೇ ಎದ್ದೇಳಿರಿ ಕರ್ತನ ಸೇವೆ ಮಾಡಲು ಸಿದ್ಧರಾಗಿರಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಸಾವಿರ ವರ್ಷಗಳ ಆಡಳಿತದ ಕೆಲವು ವಿಶೇಷತೆಗಳು**

1) **ಸೈತಾನನಿಲ್ಲದ ಆಡಳಿತವಾಗಿರುತ್ತದೆ :** ಪ್ರಕ. 20:1–2ರ ಪ್ರಕಾರ ಸೈತಾನನು ಸಾವಿರ ವರುಷಗಳಿಗಾಗಿ ಸೆರೆಯಲ್ಲಿ ಹಾಕಲ್ಪಟ್ಟಿರುವುದರಿಂದ ಇದು ಸೈತಾನ ಮತ್ತು ಅವನ ಕೆಟ್ಟತನ ಇಲ್ಲದ ಆಡಳಿತವಾಗಿರುತ್ತದೆ

   (ಪ್ರಕ. 20:8,10, 12:9, 13:14). ಇಂದು ಭೂಲೋಕದ ಜನರನ್ನು ಮರುಳುಗೊಳಿಸಿ ಸತ್ಯದೇವರಿಂದ ದೂರಕೊಂಡೊಗಿ ಪಾಪ, ಇಚ್ಛೆ, ಕೊಲೆ, ಅಕ್ರಮಕ್ಕೆ ಪ್ರೇರೇಪಿಸುವಾತನೇ ಸೈತಾನನಾಗಿದ್ದಾನೆ. ಇವತ್ತಿನ ಎಲ್ಲಾ ಸಮಸ್ಯಗಳಿಗೂ, ಸರ್ವ ಕೆಟ್ಟತನಕ್ಕೂ ಮೂಲ ಕಾರಣ ಸೈತಾನನಾಗಿದ್ದಾನೆ. ಮಹಾಸಂಕಟದ ಏಳು ವರುಷಗಳು ಸೈತಾನನು ಪೂರ್ಣ ಅಧಿಕಾರವುಳ್ಳವನಾಗಿ ಈ ಭೂಮಿಯನ್ನು ಆಳುವನು. ಈ ಕಾಲಾವಧಿಯಲ್ಲಿ ಜನರು ಸೈತಾನನಿಂದ ಅನೇಕ ಕಷ್ಟ, ನಷ್ಟ ಹಿಂಸೆಗಳಿಗೆ ಗುರಿಯಾಗುವರು. ಸೈತಾನನ ಈ ಏಳು ವರುಷದ ಅಧಿಕಾರವು ಸೋಲಿನಲ್ಲಿ ಕೊನೆಗೊಳ್ಳುತ್ತದೆ. ಅಂತ್ಯದಲ್ಲಿ ಸಾವಿರ ವರ್ಷಗಳ ಆಡಳಿತಕ್ಕಿಂತ ಮೊದಲು ಕ್ರಿಸ್ತನು ಸೈತಾನನ್ನು ಸಾವಿರ ವರುಷದ ತನಕ ಬಂಧನದಲ್ಲಿಡುವನು. ಸೈತಾನನಿಲ್ಲದ ಈ ಆಡಳಿತವಾಗಿರುವುದರಿಂದ ಲೋಕದಲ್ಲಿ ಯಾವುದೇ ಹಿಂಸೆ, ಅಪರಾಧ, ದು:ಖ, ಶಾಪ, ನೋವು, ರೋಗ, ಬಾಧೆಗಳಿಲ್ಲದೆ ಈ ಆಡಳಿತವು ಸಮಾಧಾನ, ಶಾಂತಿ, ನೆಮ್ಮದಿ ಹಾಗೂ ಆಶೀರ್ವಾದದಿಂದ ಕೂಡಿರುತ್ತದೆ.

2) **ಲೋಕವು ಫಲಭರಿತವಾಗಿದ್ದು ಸಮೃದ್ಧಿಯಿಂದ ಕೂಡಿರುತ್ತದೆ** ಸಾವಿರ ವರ್ಷಗಳ ಆಡಳಿತದಲ್ಲಿ ಭೂಮಿ ಪುನ: ಸ್ಥಾಪಿಸಲ್ಪಟ್ಟು ಫಲವತ್ತಾಗಿರುತ್ತದೆ. ಆಗ ನೀವು ಹೊಲದಲ್ಲಿ ಬೀಜ ಬಿತ್ತುವುದಕ್ಕೆ ಆತನ ಬಿತ್ತನೆಯ ಮಳೆಯನ್ನು ದಯಪಾಲಿಸುವನು. ನೆಲದ ಬೆಳೆಯಿಂದ ಸಾರವಾದ ಆಹಾರವನ್ನು ಸಮೃದ್ಧಿಯಾಗಿ ಒದಗಿಸುವನು (ಯೋವೇ. 2:22–23). ಆ ಕಾಲದಲ್ಲಿ ಯಾರು ನಿಜದೇವರನ್ನು ಆರಾಧಿಸುವುದಿಲ್ಲವೋ ಅಂಥವರ ಬೆಳೆಗಳು ಮಾತ್ರ ನಾಶವಾಗುತ್ತದೆ. ಉಳಿದವರೆಲ್ಲರ ವ್ಯವಸಾಯ ಭೂಮಿಯು ಫಲಭರಿತವಾಗಿರುತ್ತದೆ (ಜೆರ್ಕ. 14–17–19). ಜನರು ಸುಖ, ಶಾಂತಿ ನೆಮ್ಮದಿಯಾಗಿ ಜೀವಿಸುತ್ತಾರೆ (ಯೆಶಾ. 35:1–10). ಐಗುಪ್ತದೇಶದಿಂದ ಕಾನಾನಿಗೆ ಪ್ರವೇಶಿಸಿದ ಇಸ್ರಾಯೇಲ್ ಜನರಿಗೆ ದೇವರು ಅನೇಕ ವಾಗ್ದಾನಗಳನ್ನು ಮಾಡಿದ್ದನು. ನಿಮ್ಮನ್ನು ಪ್ರೀತಿಸಿ ಅಭಿವೃದ್ಧಿಪಡಿಸಿ ಹೆಚ್ಚಿಸುವನು. ಆತನು ನಿಮ್ಮ ಪಿತೃಗಳಿಗೆ ಪ್ರಮಾಣ ಮಾಡಿಕೊಟ್ಟ ದೇಶದಲ್ಲಿ ನಿಮ್ಮ ಸಂತಾನವನ್ನು, ವ್ಯವಸಾಯವನ್ನು, ನಿಮಗಿರುವ ದ್ರಾಕ್ಷಾರಸ, ಎಣ್ಣೆ, ಧಾನ್ಯ, ಹೊಲಗದ್ದೆಗಳನ್ನು, ದನಕುರಿಗಳಲ್ಲಿ ಹುಟ್ಟಿದ್ದನ್ನು ಅಭಿವೃದ್ಧಿಪಡಿಸುವೆನು (ಧರ್ಮೋ. 7:13). **"ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶಮಾಡದು; ನಿಮ್ಮ ದ್ರಾಕ್ಷೆಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ"** (ಮಲಾ. 3:11). ಆದರೂ ಇಸ್ರಾಯೇಲ ಜನರು ದೇವರ ಆಜ್ಞೆಗಳನ್ನು ಮೀರಿದ್ದರಿಂದ ಮೇಲೆ ಹೇಳಿದ ವಾಗ್ದಾನಗಳನ್ನು ಹೊಂದಲಿಲ್ಲ. ಆಶೀರ್ವಾದಕ್ಕೆ ಬದಲಾಗಿ ಕ್ಷಾಮವೂ, ವಿವಿಧ ರೋಗ, ವ್ಯಾಧಿಗಳನ್ನು ಅನುಭವಿಸಿದರು. ಈ ಶಾಪಗಳೆಲ್ಲಾ ಇವತ್ತೂ ಭೂಮಿಯಲ್ಲಿ ಮುಂದುವರಿಯುತ್ತಾ ಇವೆ. ಆದರೆ ಕ್ರಿಸ್ತನ ಸಾವಿರ ವರುಷಗಳ ಆಡಳಿತದಲ್ಲಿ ಈ ಭೂಮಿಯು ಶಾಪದ ವಶದಿಂದ ಬಿಡುಗಡೆಹೊಂದಿ ಅನೇಕ ಬದಲಾವಣೆಗಳನ್ನು ಕಾಣುತ್ತದೆ. ಭೂಮಿಗೂ ಒಂದು ಬಿಡುಗಡೆಯ ನಿರೀಕ್ಷೆ ಇದೆ (ರೋಮ. 8:19–22).

3) **ಇದು ರಾಜಾಡಳಿತವಾಗಿರುತ್ತದೆ :** ರಾಜಾಡಳಿತವೆಂದರೆ ರಾಜನಿಗೆ ಇಷ್ಟ ಬಂದಂತೆ ಆಳುವುದೆಂದಲ್ಲ. ಕ್ರಿಸ್ತನ ಈ ಆಡಳಿತ ಎಲ್ಲರಿಗೂ ಹಿತವಾದ ಸಮಾಧಾನ ಹಾಗೂ ಸಂತೋಷದ ಆಡಳಿತವಾಗಿರುತ್ತದೆ.

   ಶಾಂತಿ (ಯೆಶಾ. 2:4), ಪ್ರಮಾಣಿಕತೆ (ಯೆರೆ. 11:4–5). ನೀತಿ (ಯೆರೆ. 23:5–6). ಈ ಮೂರು ಈ ಆಡಳಿತದ ವಿಶೇಷತೆಯಾಗಿರುತ್ತದೆ. ಸೈತಾನನು ಸಾವಿರ ವರ್ಷಗಳ ಬಂಧನದಲ್ಲಿರುವುದರಿಂದ ಈ ಕಾಲದಲ್ಲಿ ಭೂಮಿಯಲ್ಲಿ ಶಾಂತಿ ಹಾಗೂ ನೀತಿ ಪುನರ್‌ಸ್ಥಾಪಿಸಲ್ಪಡುತ್ತದೆ. **"ಬಿಳೀ ಕುದುರೆಯು ನನಗೆ ಕಾಣಿಸಿತು; ಅದರ ಮೇಲೆ ಕೂತಿದ್ದವನಿಗೆ ನಂಬಿಗಸ್ತನೂ ಸತ್ಯವಂತನೂ ಎಂದು ಹೆಸರು. ಆತನು ನೀತಿಯಿಂದ ನ್ಯಾಯವಿಚಾರಿಸುತ್ತಾನೆ, ನೀತಿಯಿಂದ ಯುದ್ಧಮಾಡುತ್ತಾನೆ"** (ಪ್ರಕ. 19:11). ಕರ್ತನಾದ ಯೇಸು ಕ್ರಿಸ್ತನನ್ನು ಸರ್ವಲೋಕದ ಅರಸನನ್ನಾಗಿ ತಂದೆಯಾದ

ಯೆಹೋವನು ಒಳ್ಳೆಯವನು; ಇಕ್ಕಟ್ಟಿನ ದಿನದಲ್ಲಿ ಆಶ್ರಯದುರ್ಗವಾಗಿದ್ದಾನೆ
(ನಹೂಮ. 1:7).

ದೇವರು ಅಂಗೀಕರಿಸಿದ್ದಾನೆ. ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡು ದಾವೀದನ ಕುಟುಂಬದಿಂದ ಒಬ್ಬ ಅರಸನು ಹುಟ್ಟಿ ಲೋಕವನ್ನು ಆಳುವನೆಂದು ತಿಳಿಸುತ್ತದೆ (ಯೆಶಾ. 9:6–7, ಲೂಕ. 1:33). ಆದಿಯಲ್ಲಿ ದೇವರು ಮನುಷ್ಯನನ್ನು ಸೃಷ್ಟಿಸಿ ಏದೆನ್ ತೋಟದಲ್ಲಿ ಇರಿಸಿ ಅವನಿಗೆ ಆಡಳಿತವನ್ನು ಒಪ್ಪಿಸಿದನು (ಲೂಕ. 1:71, 2 ಸಮು. 7:12–16). ಆದರೆ ಮನುಷ್ಯನು ದೇವರಿಗೆ ಅವಿಧೇಯನಾಗುವುದರ ಮೂಲಕ ಅಧಿಕಾರವನ್ನು ಕಳಕೊಂಡನು (ಆದಿ. 1:26–28). ಆದರೆ ಕೊನೆಯ ಆದಾಮನಾದ ಯೇಸುಕ್ರಿಸ್ತನ

1 ಕೊರಿ. 15:45 ಈ ಅಧಿಕಾರವನ್ನು ಸಾವಿರ ವರುಷಗಳ ಆಡಳಿತದ ಮೂಲಕ ಪುನರ್‌ಸ್ಥಾಪಿಸುತ್ತಾನೆ.

4) **ಸಾರ್ವತ್ರಿಕ ಆಡಳಿತವಾಗಿರುತ್ತದೆ :** ಈ ಕಾಲದಲ್ಲಿ ಕರ್ತನಾದ ಯೇಸುಕ್ರಿಸ್ತನು ಇದೇ ಲೋಕಕ್ಕೆ ಅರಸನಾಗಿರುತ್ತಾನೆ. ಆತನ ಆಡಳಿತದಲ್ಲಿ ಲೋಕದ ಎಲ್ಲಾ ದೇಶಗಳು ಒಳಗೊಂಡಿರುತ್ತವೆ. ಇಂದಿನ ದಿನಗಳಲ್ಲಿ ಇದು ಅಸಾಧ್ಯವೆಂದು ತೋರಿದರೂ ದೇವರು ಈ ಕಾರ್ಯವನ್ನು ಮಾಡುವವನಾಗಿರುತ್ತಾನೆ. ಯೆಹೋವನು ಭೂಲೋಕಕ್ಕೆಲ್ಲಾ ರಾಜನಾಗಿರುವನು. ಹೀಗೆ ಒಬ್ಬ ಅರಸನ ಕೈ ಕೆಳಗೆ ಲೋಕದ ಸರ್ವಜನರೂ ಸಮಾಧಾನವಾಗಿರುತ್ತಾರೆ.

5) **ಮನುಷ್ಯರು ದೀರ್ಘ ಆಯಸ್ಸುವುಳ್ಳವರಾಗಿರುತ್ತಾರೆ :** ಪಾಪವು ಹೆಚ್ಚಿದಂತೆ ಮಾನವನ ಆಯುಸ್ಸು ಕಡಿಮೆಯಾಗುತ್ತಾ ಬಂತು. ಆದಿ. 6:3ರಲ್ಲಿ ಆಗ ಯೆಹೋವನು ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವುದಿಲ್ಲ. ಅವರು ಭ್ರಷ್ಟರಾಗಿರುವುದರಿಂದ ಮರ್ತ್ಯರೇ. ಅವರ ಆಯುಸ್ಸು ನೂರಿಪ್ಪತ್ತು ವರುಷವಾಗಿರಲಿ ಅಂದನು. ಆದಿ ಪಿತೃಗಳಿಗಿದ್ದ ಆಯುಸ್ಸು ಕ್ರಮೇಣ ಕಡಿಮೆಯಾಗಿ ಮೋಶೆಯ ಕಾಲಕ್ಕೆ ಬಂದಾಗ ನಮ್ಮ ಆಯುಷ್ಕಾಲವು ಎಪ್ಪತ್ತು ವರುಷ ಬಲ ಹೆಚ್ಚಿದರೆ ಎಂಬತ್ತು ಎಂದಾಯಿತು (ಕೀರ್ತ. 90:10). ಆದರೆ ಸಾವಿರ ವರುಷದ ಆಳ್ವಿಕೆಯಲ್ಲಿ ಪಾಪವು ಇಲ್ಲದ್ದರಿಂದ ಮನುಷ್ಯರು ದೀರ್ಘಾಯುಸ್ಸುವುಳ್ಳವರಾಗಿರುತ್ತಾರೆ. ಕೆಲವು ದಿವಸ ಮಾತ್ರ ಬದುಕತಕ್ಕ ಕೂಸಾಗಲಿ, ವಯಸ್ಸಾದ ಮುದುಕನಾದವನಾಗಲಿ ಅಲ್ಲಿರುವುದಿಲ್ಲ. ಯುವಕನು ನೂರು ವರುಷದೊಳಗೆ ಸಾಯನು. ಪಾಪಿಷ್ಠನಿಗೂ ನೂರು ವರುಷದೊಳಗೆ ಶಾಪತಗುಲದು. ಮನುಷ್ಯರು ದೀರ್ಘಾಯುಸ್ಸುವುಳ್ಳ ವರಾದರೂ ಮರಣವು ಇದೆ ಎಂದು ಮೇಲಿನ ವಚನಗಳ ಮೂಲಕ ತಿಳಿದುಕೊಳ್ಳಬಹುದು.

6) **ಕ್ರೂರ ಪ್ರಾಣಿಗಳ ಸ್ವಭಾವದಲ್ಲಿ ಬದಲಾವಣೆಯಾಗಿರುತ್ತದೆ :** ಇಂದು ಅತ್ಯಂತ ಕ್ರೂರಿಯಾಗಿರುವಂಥ ಪ್ರಾಣಿಗಳು ಸಾವಿರ ವರ್ಷಗಳ ಆಳ್ವಿಕೆಯ ಕಾಲದಲ್ಲಿ ಪರಸ್ಪರ ಪ್ರೀತಿಯಿಂದ ಜೀವಿಸುತ್ತವೆ. **"ತೋಳವು ಕುರಿಯ ಸಂಗಡ ವಾಸಿಸುವದು, ಕರುವೂ ಪ್ರಾಯದ ಸಿಂಹವೂ ಪುಷ್ಟಪಶುವೂ ಒಟ್ಟಿಗಿರುವವು; ಇವುಗಳನ್ನು ಚಿಕ್ಕ ಮಗುವು ನಡಿಸುವದು. ಹಸುವು ಕರಡಿಯು ಸಂಗಡ ಮೇಯುವವು; ಅವುಗಳ ಮರಿಗಳು ಜೊತೆಯಾಗಿ ಮಲಗುವವು; ಸಿಂಹವು ಎತ್ತಿನಂತೆ ಹುಲ್ಲು ತಿನ್ನುವದು. ಮೊಲೆಕೂಸು ನಾಗರಹುತ್ತದ ಮೇಲೆ ಆಡುವದು; ಮೊಲೆಬಿಟ್ಟ ಮಗು ಹಾವಿನ ಬಿಲದ ಮೇಲೆ ಕೈಹಾಕುವದು ತನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರೂ ಕೇಡು ಮಾಡುವುದಿಲ್ಲ, ಯಾರೂ ಹಾಳುಮಾಡುವುದಿಲ್ಲ"** (ಯೆಶಾ. 11:6–8). ಎಲ್ಲಾ ಕ್ರೂರ ಪ್ರಾಣಿಗಳ ಕ್ರೂರತನದ ಸ್ವಭಾವ ಹೋಗಿ ಸಾಧು ಸ್ವಭಾವ ಬರುವದು.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

**ನಗೆ ಹನಿ**

**ಬೆಲ್ ಬಾಟಮ್ ಪ್ಯಾಂಟ್**

ಗುಂಡ : "ನನಗೆ ಒಂದು ಪ್ಯಾಂಟ್ ಹೊಲೆದು ಕೊಡಿ".
ಟೈಲರ್ : "ಆಗಲಿ. ಅಳತೆ ತೆಗೆದುಕೊಳ್ಳುವೆನು."
ಟೈಲರ್ ಗುಂಡನ ಅಳತೆ ತೆಗೆದುಕೊಂಡನು.
ಟೈಲರ್ : "ಬಾಟಮ್‌ನಲ್ಲಿ ಎಷ್ಟು ಬೆಲ್ ಇಡಬೇಕು?"
ಗುಂಡ : "ನಾನು ಪ್ಯಾಂಟ್ ಹೊಲೆಯಲು ಹೇಳುತ್ತಿರುವೆನು. ಸೈಕಲ್ ಅಲ್ಲ."

ಜೇಡಿಮಣ್ಣು ಕುಂಬಾರನ ಕೈಯಲ್ಲಿ ಹೇಗೋ, ಹಾಗೆಯೇ ನೀವು ನನ್ನ (ದೇವರ) ಕೈಯಲ್ಲಿದ್ದೀರಿ (ಯೆರೆ. 18:6).

## ಕವನ :

ಒಂದು ಚಿಕ್ಕ ಸೀಮೆಎಣ್ಣೆ ದೀಪವು ಅಗೋ
ದೂರದಲ್ಲಿ ಒಂದು ಗುಡಿಸಲಿನ ವರಾಂಡದಲ್ಲಿ ಇಟ್ಟಿದ್ದಾರೆ
ಅದು ಒಂದು ಚಿಕ್ಕ ಬೆಳಕು ಮಾತ್ರವಾಗಿತ್ತು. ಆದರೆ
ಭಯಾನಕವಾದ ಕತ್ತಲೆಯಲ್ಲಿ, ಹತ್ತಿರದಿಂದ ಮತ್ತು ದೂರದಿಂದ
ಅದನ್ನು ನೋಡಿದವರಿಗೂ, ಅದರ ಬಳಿಯಲ್ಲಿ ಕೂತಿದ್ದವರಿಗೂ
ಎಷ್ಟು ಆಶೀರ್ವಾದವಾಗಿತ್ತು.
ನಿನ್ನ ಜೀವಿತವು ಬತ್ತಿ ಮಾತ್ರ ಉರಿಯದೆ ಎಚ್ಚರದಿಂದಿರು,
ಉರಿದುಹೋದ ಬತ್ತಿಯನ್ನು ತೆಗೆದುಹಾಕು;
ಪುನ: ಎಣ್ಣೆಯನ್ನು ಹಾಕಿ ಅದನ್ನು ಉರಿಸು.
ದೈವೀಕವಾದ ಅನ್ಯೋನ್ಯತೆಯ ಮೂಲಕ
ಇದನ್ನು ಪುನ: ಸ್ಥಾಪಿಸಲು ನಿನಗೆ ಸಾಧ್ಯವಾಗುತ್ತದೆ.
ಒಳ್ಳೆಯ ಜಯದ ಬೆಳಕಾಗಿರು
ಅನೇಕರಿಗೆ ಆಶೀರ್ವಾದದ ಬೆಳಕಾಗಿರು.

## ನಗೆಹನಿ

**ಗುಂಡನಿಗೆ ಗಾಬರಿ**

ಡಾಕ್ಟರ್ ಸುತ್ತಲೂ ನೋಡುತ್ತಿದ್ದರು. ಅಪರೇಷನ್ ಥಿಯೇರಟರ್‌ನಲ್ಲಿ ಗುಂಡನ ಅಪ್ಪ ಮಲಗಿದ್ದನು. ಅಪರೇಷನ್ ಮುಗಿಯಿತು.

ಡಾಕ್ಟರ್: "ನರ್ಸ್, ಅಪರೇಷನ್ ಮುಗಿಯಿತು ?"

ನರ್ಸ್: "ತುಂಬಾ ಸಂತೋಷ ಸಾರ್".

ಡಾಕ್ಟರ್: "ನರ್ಸ್, ನನಗೆ ಒಂದು ಅನುಮಾನ?"

ನರ್ಸ್: "ಏನು ಡಾಕ್ಟರ್ ?"

ಡಾಕ್ಟರ್: "ನಾನು ಅಪರೇಷನ್ ಮಾಡಲು ಬಳಸಿದ ಕತ್ತರಿ ಕಾಣುತ್ತಿಲ್ಲ. ಎಲ್ಲಿ ಇಟ್ಟೆ. ಬಹುಶ: ರೋಗಿಯ ಹೊಟ್ಟೆಯಲ್ಲಿ ಇಟ್ಟು ಮರೆತು ಹೊಲಿಗೆ ಹಾಕಿರಬೇಕು".

---

## ಆತ್ಮೀಕ ಹೊದಿಕೆ

**ನೀವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಈಗಾಗಲೇ ಸೇವೆಮಾಡುತ್ತಿದ್ದೀರಿ. ಒಂದು ವೇಳೆ ನೀವು ಸ್ವತಂತ್ರ ಸೇವಕರಾಗಿದ್ದರೆ ಪಾ॥ ಸುನಿಲ್ ಜಾನ್ ಡಿ'ಸೋಜಾರವರ ಮೂಲಕ ಆತ್ಮೀಕ ಹೊದಿಕೆಯನ್ನು ಹೊಂದಬಹುದು.**

***ಹೊಂದಲು ಇಚ್ಛಿಸುವವರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9844550512, 9902334941, 08202002781**

---

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.**

ನಾನು ಯೆಹೋವನ ದೃಷ್ಟಿಯಲ್ಲಿ ಮಾನ್ಯನು, ನನ್ನ ದೇವರೇ ನನಗೆ ಬಲವು
(ಯೆಶಾ. 49:5).

# ತೀರ್ಮಾನಗಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಪ್ರಿಯರೇ, ಸೈತಾನನು ಕುಟುಂಬವಾಗಿ ರಕ್ಷಣೆ ಹೊಂದಿಕೊಳ್ಳುವುದನ್ನೂ ಮಾತ್ರವಲ್ಲ ಒಂದು ವೇಳೆ ರಕ್ಷಣೆ ಹೊಂದಿದರೂ ಕುಟುಂಬವಾಗಿ ಆರಾಧನೆಗೆ ಬರುವುದನ್ನು ವಿರೋಧಿಸುತ್ತಾನೆ. ಏಕೆಂದರೆ ನೀನು ಕುಟುಂಬವಾಗಿ ದೇವರನ್ನು ಸೇವಿಸುವಿಯಾದರೆ ದೇವರ ದಯೆ, ಆಶೀರ್ವಾದಗಳು ನಿನಗುಂಟಾಗುತ್ತದೆ. ಪ್ರಿಯ ದೇವ ಮಗುವೆ, ನಿನ್ನ ತೀರ್ಮಾನ ಏನಾಗಿದೆ? ಪ್ರಿಯ ದೇವ ಮಗುವೆ ದೇವರು ಒಮ್ಮೆ ನಿನ್ನನ್ನು ಕೆಸರೊಳಗಿನಿಂದ ಮೇಲಕೆತ್ತಿದ್ದಾನೆ. ನೀನು ತಿರುಗಿ ಅದೇ ಕೆಸರೊಳಗೆ ಇಳಿದು ಅಶುದ್ಧಮಾಡಲು ಬಯಸುತ್ತಿಯಾ? "ತೊಲಗಿರಿ, ತೊಲಗಿರಿ ಬಾಬೆಲಿನಿಂದ ಹೊರಡಿರಿ. ಅಶುದ್ಧವಾದ ಯಾವುದನ್ನೂ ಮುಟ್ಟದಿರಿ. ಅದರ ಮಧ್ಯದೊಳಗಿನಿಂದ ತೆರಳಿರಿ (ಯೆಶಾ. 52:11). 12 ನೇ ವಾಕ್ಯ ಹೇಳುತ್ತದೆ. ನೀವು ಅವಸರದಿಂದ ಹೊರಡಬೇಕಾಗಿಲ್ಲ (ಒಂದು ತೀರ್ಮಾನದಲ್ಲಿ ದೃಢವಾಗಿ ಹೊರಡಿರಿ ಎಂದರ್ಥ).

**ವಯಸ್ಕರ ಸ್ವರ**

3) **ಯೊಸೇಫನ ತೀರ್ಮಾನ :** 'ದೇವರಿಗೆ ವಿರುದ್ಧವಾಗಿ ಹೇಗೆ ಪಾಪಮಾಡಲಿ' (ಆದಿ. 39:7–8). ಯೊಸೇಫನನ್ನು ಪೋಟಿಫೋರನ ಹೆಂಡತಿಯು ಸಂಗವುಕ್ಕೆ ಒತ್ತಾಯಿಸಿದ್ದಾಗ ಈ ಮೇಲಿನ ಮಾತನ್ನು ಹೇಳಿ ಪಾಪವನ್ನು ಬಿಟ್ಟು ಓಡಿ ಹೋಗುವ ತೀರ್ಮಾನ ಕೈಗೊಂಡನು. ಯೊಸೇಫನಲ್ಲಿ ದೇವರ ಉನ್ನತ ಯೋಜನೆಗಳಿದ್ದವು. ಅನೇಕ ಕನಸು ದರ್ಶನಗಳನ್ನು ದೇವರು ಯೊಸೇಫನಿಗೆ ಪ್ರಕಟಿಸಿದನು. ಆದ್ದರಿಂದ ಸೈತಾನನು ಆತನನ್ನು ಪಾಪದಲ್ಲಿ ಬೀಳಿಸಿ ಅದನ್ನು ನಷ್ಟಪಡಿಸಲು ಯೋಜನೆ ಹಾಕಿದ್ದನು. ಆದರೆ ಯೊಸೇಫನು ತೀರ್ಮಾನದಲ್ಲಿ ದೃಢವಾಗಿದ್ದನು. ಪ್ರಿಯ ದೇವಮಗುವೆ ನಿನ್ನಲ್ಲಿ ಅನೇಕ ಕನಸು ದರ್ಶನಗಳಿರಬಹುದು. ಅದನ್ನು ಸೈತಾನನು ಕೆಡಿಸಿ ನಿನ್ನನ್ನು ಪಾಪದಲ್ಲಿ ಬೀಳಿಸಲು ಶತಪ್ರಯತ್ನಗಳನ್ನು ಮಾಡುತ್ತಾನೆ. ಎಚ್ಚರವಾಗಿದ್ದು ತೀರ್ಮಾನದಲ್ಲಿ ದೃಢವಾಗಿರು. ಯೊಸೇಫನು ದೇವರ ವಿರುದ್ಧವಾಗಿ ಪಾಪ ಮಾಡಲು ಭಯಪಟ್ಟು ಓಡಿ ಹೋದ್ದರಿಂದ ಅವನು ಸೆರೆಮನೆಗೆ ಬಿದ್ದರೂ ದೇವರು ಅವನ ಸಂಗಡವಿದ್ದು ಎಲ್ಲಾ ಕೆಲಸಗಳನ್ನು ಕೈಗೂಡಿಸುತ್ತಾ ಇದ್ದನು (ಆದಿ. 39:21–23). ಯೌವನಸ್ಥರೇ ನೀವು ಕೈಗೊಂಡ ತೀರ್ಮಾನ ದೃಢವಾಗಿರಲಿ.

4) **ರೂತಳ ತೀರ್ಮಾನ :** ಮೋವಾಬ್ಯಳಾದ ರೂತಳು ಇಸ್ರಾಯೇಲ್ ದೇವರನ್ನು ಸೇವಿಸುವ ದೃಢವಾದ ತೀರ್ಮಾನ ಕೈಗೊಳ್ಳುತ್ತಾಳೆ. ನವೋಮಿ ತನ್ನ ಗಂಡು ಮಕ್ಕಳು ಸತ್ತು ಹೋಗಿ ತನ್ನ ಇಬ್ಬರು ಸೊಸೆಯೊಂದಿಗೆ ಒಂಟಿಯಾಗಿ, ಬಾಳಬೇಕಾದರೆ ತಿರುಗಿ ಬೇತ್ಲೆಹೇಮ್ ದೇಶಕ್ಕೆ ಹೋಗಲು ತೀರ್ಮಾನಿಸಿ ತನ್ನ ಸೊಸೆಯನ್ನು ಕರೆದು ನೀವು ಹಿಂತಿರುಗಿ ಹೋಗಿರಿ ಎಂದಾಗ ಒರ್ಫಳು ಆಕೆಯನ್ನು ಮುದ್ದಿಟ್ಟು ಹೊರಟು ಹೋದಳು. ಆದರೆ ರೂತಳು ಅದಕೊಪ್ಪದೆ ತನ್ನ ತೀರ್ಮಾನವನ್ನು ಅತ್ತೆಗೆ ತಿಳಿಸುತ್ತಾಳೆ. "ನಿನ್ನನ್ನು ಬಿಟ್ಟು ಹೋಗಲು ನನ್ನನ್ನು ಒತ್ತಾಯಿಸಬೇಡಾ. ನೀನು ಎಲ್ಲಿಗೆ ಹೋದರೂ ನಾನು ಅಲ್ಲಿಗೆ ಬರುವೆ ನೀನು ವಾಸಿಸುವಲ್ಲೇ ನಾನೂ ವಾಸಿಸುವೆ. ನಿನ್ನ ಜನರೇ ನನ್ನ ಜನರು. ನಿನ್ನ ದೇವರೇ ನನ್ನ ದೇವರು. ನೀನು ಸಾಯುವಲ್ಲಿ ನಾನೂ ಸಾಯುವೆನು. ಮರಣದಿಂದಲ್ಲದೆ ನಾನು ನಿನ್ನನ್ನು ಅಗಲಿದರೆ ಯೆಹೋವನು ನನಗೆ ಬೇಕಾದ್ದನ್ನು ಮಾಡಲಿ (ರೂತ. 1:16–17). ಅಕೆಯ ದೃಢ ತೀರ್ಮಾನವನ್ನು ನೋಡಿ ನೊವೋಮಿ ಸುಮ್ಮನಾದಳು (ರೂತ. 1:18). ಅನ್ಯಳಾದ ಒಬ್ಬ ಸ್ತ್ರೀಯ ತೀರ್ಮಾನ ಎಷ್ಟೋ ದೃಢವಾಗಿದೆ ಎಂದು ನಾವು ತಿಳಿದುಕೊಳ್ಳಬಹುದು. ನಾವು ಯೇಸುವನ್ನು ಇಷ್ಟು ತಿಳಿದು ವರ್ಷನುಗಟ್ಟಳೇ ಆತನನ್ನು ಸೇವಿಸಿದ್ದರೂ ಅನೇಕ ವೇಳೆ ಹೋರಾಟ, ಇಕ್ಕಟ್ಟುಗಳು ಬಂದಾಗ ತೀರ್ಮಾನದಲ್ಲಿ ತಪ್ಪುವವರಾಗಿರುತ್ತೇವೆ. ದೇವ ಮಗುವೆ, ನೀನು ಕ್ರಿಸ್ತನಿಂದ ಅಗಲಿ ಹೋಗುವುದು ಆತನಿಗೆ ಇಷ್ಟವಿಲ್ಲ, ನಂಬಿಕೆಯಿಂದ ಜೀವಿಸು. ಸಾಯಬೇಕಾದರೆ ನಂಬಿಗಸ್ತನಾಗು (ಪ್ರಕ. 2:10). ಆದರೆ ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು, ಅವನು ಹಿಂತೆಗೆದರೆ ಅವನಲ್ಲಿ ನನಗೆ ಸಂತೋಷವಿರುವುದಿಲ್ಲ (ಇಬ್ರಿ. 10:38). ಪ್ರತಿಕೂಲ ಸಮಯ ಬಂದ್ದಾಗಲೂ ಕಷ್ಟ ಹೋರಾಟಗಳು ಮುತ್ತಿಕೊಂಡರೂ ಕ್ಷಣಿಕ ಸುಖಕ್ಕಾಗಿ ಲೋಕಕ್ಕೆ ಹಿಂತಿರುಗಿ ಹೋಗದೆ ತೀರ್ಮಾನದಲ್ಲಿ ದೃಢವಾಗಿರು.

5) **ದಾವೀದನ ತೀರ್ಮಾನ :** 'ನಿನ್ನ ವಾಕ್ಯಗಳನ್ನು ಕೈಕೊಳ್ಳುವನೆಂದು ನಿರ್ಣಯಿಸಿಕೊಂಡಿದ್ದೇನೆ (ಕೀರ್ತ.

ಆಜ್ಞೆಯನ್ನು ಪಾಲಿಸುವವನು ಆತ್ಮವನ್ನು ಪಾಲಿಸುವನು

(ಜ್ಞಾನೋ. 19:16).

119:52). ಸತ್ಯವೇದದಲ್ಲಿ ದಾವೀದನು ಅನೇಕ ತೀರ್ಮಾನಗಳನ್ನು ಮಾಡಿರುತ್ತಾನೆ. ನಾನು ನೆನೆಸುತ್ತೇನೆ ದೇವರ ವಾಕ್ಯವನ್ನು ಕೈಕೊಳ್ಳುವ ತೀರ್ಮಾನ ಒಂದು ಶ್ರೇಷ್ಟವಾದ ತೀರ್ಮಾನವಾಗಿದೆಯಂದು ಯೆಹೋವನೇ ನಿನ್ನ ನಿಬಂಧನೆಗಳ ಮಾರ್ಗವನ್ನು ಉಪದೇಶಿಸು. ಕಡೇ ತನಕ ಅದರಲ್ಲಿಯೇ ನಡೆಯುವೆನು (ಕೀರ್ತ. 119:33). ಕಡೇವರೆಗೂ ಯಾವಾಗಲೂ ನಿನ್ನ ನಿಬಂಧನೆಗಳನ್ನು ಕೈಗೊಳ್ಳುವುದಕ್ಕೆ ಮನಸ್ಸುಮಾಡಿದ್ದೇನೆ (ಕೀರ್ತ. 119:112). ದೇವ ಮಕ್ಕಳಾದ ನಾವು ಪ್ರತಿ ನಿತ್ಯವೂ, ಪ್ರತಿ ವಾರ ವಾರವೂ ಎಷ್ಟೋ ದೇವರ ವಾಕ್ಯ ಕೇಳಿ ಇನ್ನೊಂದು ಕಿವಿಯಲ್ಲಿ ಬಿಟ್ಟು ಬಿಡುವವರಾಗಿರುತ್ತೇವೆ ಹೊರತು ದಾವೀದನಂತೆ ದೇವರ ವಾಕ್ಯವನ್ನು ಕೈಗೊಂಡು ನಡೆಯುವುದರಲ್ಲಿ ಮನಸ್ಸು ಮಾಡುವುದಿಲ್ಲ. ಯೋಬನ ಪುಸಕ್ತದಲ್ಲಿ ನಾವು ಓದುತ್ತೇವೆ. "ಅಂಧಕಾರವು ನಮಗೆ ಕವಿದಿರುವುದರಿಂದ ವಾಕ್ಯವನ್ನು ಸರಿಪಡಿಸಿಕೊಳ್ಳಲಾರೆನು (ಯೋಬ. 37:19).

ಮುಂದುವರಿಯುವದು.......

**ಪಾ॥ ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್, ಕಾಮಗೆರೆ.

## ಆಶ್ರಮದ ಅವಶ್ಯಕತೆಗಳು

1. **30 ಟೇಬಲ್**
2. **60 ಬೆಂಚ್**
3. **ಟೆಂಪೋ ಟ್ರಾವಲ್ಸ್**
4. **ಅಕ್ಕಿ, ಸಕ್ಕರೆ, ದವಸಧಾನ್ಯ**

ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**9902334941, 08202002781, 09964070654.**

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೈವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ಅವನು (ಯೇಸು) ಮೊರೆಯಿಡುವ ಬಡವರನ್ನೂ ದಿಕ್ಕಿಲ್ಲದೆ ಕುಗ್ಗಿದವರನ್ನೂ ಉದ್ಧರಿಸುವನು (ಕೀರ್ತ. 72:12).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

ಆರ್ಥಿಕ ಸಹಾಯ ನೀಡಲಿಚ್ಛಿಸುವವರು :

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ಪ್ರಾರ್ಥನಾ ಮನವಿಗಳು

- ನಮ್ಮ ದೇಶದಲ್ಲಿ ಅಧಿಕಾರಕ್ಕೆ ಬಂದಿರುವ ಪ್ರತಿಯೊಂದು ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಸುವುದಕ್ಕಾಗಿ ಪ್ರಾರ್ಥಿಸಿರಿ.
- ಉತ್ತರ ಖಂಡದಲ್ಲಿ ಮಳೆಯಿಂದಾಗಿ ಅನೇಕ ಜನರು ಸಾವನ್ನಪ್ಪಿದ್ದಾರೆ ಮತ್ತು ಮನೆಗಳನ್ನು ಕಳೆದುಕೊಂಡ ಪ್ರತಿಯೊಂದು ಜನರನ್ನು ಕರ್ತನು ಸಂಧಿಸುವುದಕ್ಕಾಗಿ ಪ್ರಾರ್ಥಿಸಿರಿ.
- ನಮ್ಮ ರಾಜ್ಯದಲ್ಲಿ, ದೇಶದಲ್ಲಿ ನಡೆಯುತ್ತಿರುವ ಆತ್ಯಾಚಾರ, ಆತ್ಮಹತ್ಯೆ, ವ್ಯಭಿಚಾರ, ಕೊಲೆ, ಇವುಗಳಿಂದ ಕರ್ತನು ಜನರನ್ನು ರಕ್ಷಿಸುವುದಕ್ಕಾಗಿ ಮತ್ತು ಅವರಿಗೆ ರಕ್ಷಣೆಕೊಡುವಂತೆ ಪ್ರಾರ್ಥಿಸಿರಿ.
- ಕರ್ನಾಟಕ ರಾಜ್ಯದಲ್ಲಿರುವ ಪ್ರತಿಯೊಬ್ಬ ಯೌವನಸ್ಥರಿಗಾಗಿ, ವಿದ್ಯಾರ್ಥಿಗಳಿಗಾಗಿ ಪ್ರಾರ್ಥಿಸಿರಿ.
- ಭಾರತ ದೇಶದಲ್ಲಿ ನಿರಂತರವಾಗಿ ಸಂಭವಿಸುತ್ತಿರುವ ಬಾಂಬ್ ಸ್ಫೋಟ, ಭಯೋತ್ಪಾದನೆಯಿಂದ ದೇಶವನ್ನು ಸಂರಕ್ಷಿಸಿ ಕಾಪಾಡುವುದಕ್ಕಾಗಿ ಪ್ರಾರ್ಥಿಸಿರಿ.
- ಸುವಾರ್ತೆ ಸಾರಲು ಅಡ್ಡಿಪಡಿಸುವ ರಾಜ್ಯಗಳಲ್ಲಿ ಹಾಗೂ ದೇಶಗಳಲ್ಲಿ ಸುವಾರ್ತೆಗಾಗಿ ಕರ್ತನು ಮಾರ್ಗಗಳನ್ನು ತೆರೆಯುವುದಕ್ಕಾಗಿ ಪ್ರಾರ್ಥಿಸಿರಿ.
- ನಮ್ಮ ರಾಜ್ಯದಲ್ಲಿ ಮತ್ತು ದೇಶದಲ್ಲಿ ಹರಡುತ್ತಿರುವ ಎಲ್ಲಾ ಅಂಟುರೋಗಗಳಿಂದ ತನ್ನ ಜನರನ್ನು ಕರ್ತನು ರಕ್ಷಿಸುವಂತೆ ಪ್ರಾರ್ಥಿಸಿರಿ (ವಿಮೋ. 15:26).
- ನಮ್ಮ ರಾಜ್ಯದಲ್ಲಿ ಮತ್ತು ದೇಶದಲ್ಲಿರುವ ಬರಗಾಲಗಳು, ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ ನೀಗುವಂತೆ ಸಮೃದ್ಧಿಯುಳ್ಳ ದೇಶವನ್ನಾಗಿ ಮಾರ್ಪಡಿಸುವಂತೆ ಪ್ರಾರ್ಥಿಸಿರಿ.

ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ

(ನೆಹೆ. 8:10).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು! ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ ಹರಿದು ಬರುವ ಶ್ರೇಷ್ಠ ತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ"** (ಕೀರ್ತ. 133:1–3).

**"ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು ನಿಮ್ಮನ್ನು ಪ್ರಬೋಧಿಸುತ್ತೇನೆ. ನೀವು ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ ದೀರ್ಘ ಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾದ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ"** (ಎಫೆ. 4:1–3). **"ಆ ಸ್ಥಿರಚಿತ್ತವನ್ನೂ ಆದರಣೆಯನ್ನೂ ಕೊಡುವ ದೇವರು ನೀವು ಕ್ರಿಸ್ತ ಯೇಸುವನ್ನು ಅನುಸರಿಸಿ ಒಂದೇ ಮನಸ್ಸುಳ್ಳವ ರಾಗಿರುವಂತೆ ನಿಮಗೆ ದಯಪಾಲಿಸಲಿ"** (ರೋಮ. 15:5).

3) **ಮೂರು ವಿಧವಾದ ಉಪವಾಸ ಪ್ರಾರ್ಥನೆ ಮಾಡಬಹುದು:**
1) ಏನು ತಿನ್ನದೆ, ಏನು ಕುಡಿಯದೆ ಈ ಉಪವಾಸ ದೇವಸೇವಕನಾದ ಮೋಶೆ ಅ.ಕೃ. 9:9 ರಲ್ಲಿ ಪೌಲನು ಮಾಡಿದನು.

2) ಆಹಾರ ಬಿಟ್ಟು ನೀರು ಕುಡಿದು ಮಾಡುವಂತಹ ಉಪವಾಸ ಪ್ರಾರ್ಥನೆ.

3) ಅಂಶೀಕವಾದ ಉಪವಾಸ ಪ್ರಾರ್ಥನೆ (ದಾನಿ. 10:1–3). ನಮಗೆ ಪ್ರಿಯವಾದ ಮಾಂಸ ಆಹಾರವನ್ನು ತ್ಯಜಿಸಿ ಸ್ವಲ್ಪ ಹಣ್ಣು ಹಂಪಲುಗಳನ್ನು ಸೇವಿಸಿ ಮಾಡುವ ಉಪವಾಸ ಪ್ರಾರ್ಥಯೋ ಅಂಶೀಕ ಉಪವಾಸ ಪ್ರಾರ್ಥನೆ.

1) **ಏನೂ ತಿನ್ನದೆ, ಏನೂ ಕುಡಿಯದೆ ಮಾಡುವಂತಹ ಉಪವಾಸ ಪ್ರಾರ್ಥನೆ** (ಅ.ಕೃ. 9:9). ಈ ಉಪವಾಸ ಕೆಲವರಿಗೆ ಕಠಿಣವಾಗಿ ಕಂಡರೂ ಇದನ್ನು ಮಾಡಲು ಪರಿಶುದ್ಧಾತ್ಮನು ಬಲವನ್ನು ಕೊಡುತ್ತಾನೆ. ಜೆಕ. 4:6 ಬಲದಿಂದಲ್ಲ ಪರಾಕ್ರಮದಿಂದಲ್ಲ ನಿನ್ನ ಆತ್ಮನಿಂದಲೇ ಎಂದು ಹೇಳಿದ ವಚನ ಪ್ರಕಾರ ದೇವರು ಉಪವಾಸ ಪ್ರಾರ್ಥನೆ ಮಾಡಲು ಬಲಕೊಡುತ್ತಾನೆ. ಫಿಲಿ. 4:13 ರಲ್ಲಿ ಪೌಲನು ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲವನ್ನು ಮಾಡಲು ಶಕ್ತನು ಎಂದು ಪೌಲನು ಹೇಳಿದಕ್ಕೆ ಕರ್ತನು ನಮ್ಮ ಬಲಹೀನತೆಯಲ್ಲಿ ಬಲವನ್ನು ಕೊಡುತ್ತಾನೆ. ನಾನು ನೀರಿಲ್ಲದೆ ಆಹಾರವಿಲ್ಲದೆ 4 ದಿವಸಗಳವರೆಗೆ ಉಪವಾಸ ಪ್ರಾರ್ಥನೆ ಮಾಡಲು ಕರ್ತನು ನನಗೆ ಸಹಾಯ ಮಾಡಿದನು.

2) **ಅಹಾರವಿಲ್ಲದೆ ನೀರನ್ನು ಮಾತ್ರ ಕುಡಿದು ಮಾಡುವಂತಹ ಉಪವಾಸ ಪ್ರಾರ್ಥನೆ :** ಲೂಕ. 4:2 ರ ಪ್ರಕಾರ ಈ ಉಪವಾಸವನ್ನು ಕರ್ತನಾದ ಯೇಸುಕ್ರಿಸ್ತನು ಮಾಡಿದನು. ದೇವರ ಕೃಪೆಯಿಂದ ಅನೇಕ ವರ್ಷಗಳಿಂದ ವರ್ಷಕ್ಕೆ ಒಂದು ಸಾರಿಯಾದರೂ 40 ದಿನ, 21 ದಿನ, 14 ದಿನ ಹೀಗೆ ಅನೇಕ ಸಾರಿ ಉಪವಾಸ ಪ್ರಾರ್ಥನೆ ಮಾಡಲು ಕರ್ತನಾದ ಯೇಸುಕ್ರಿಸ್ತನು ಕೃಪೆಯನ್ನು ಅನುಗ್ರಹಿಸಿದ್ದಾನೆ.

3) **ಅಂಶಿಕವಾದ ಉಪವಾಸ ಪ್ರಾರ್ಥನೆ :** ದಾನಿ. 10:3 ಮೂರು ವಾರ ಮುಗಿಯುವ ತನಕ ನಾನು ರುಚಿ ಪದಾರ್ಥವನ್ನು ತಿನ್ನಲಿಲ್ಲ. ಮಾಂಸವನ್ನು ದ್ರಾಕ್ಷರಸವನ್ನು ತನ್ನ ಬಾಯಿಗೆ ಹಾಕಲಿಲ್ಲ, ಎಣ್ಣೆಯನ್ನು ಹಚಿಕೊಳ್ಳಲಿಲ್ಲ. ಈ ಉಪವಾಸವು ಸುಲಭವಾದರೂ ಕೆಲವರಿಗೆ ಕಷ್ಟಕರವಾದದ್ದಾಗಿದೆ. ಇದಕ್ಕೆ ಕಾರಣ ಹಲವರು ಮಾಂಸ, ಮೀನಿನ ಪದಾರ್ಥವಿಲ್ಲದೆ, ರೊಟ್ಟಿ ಪದಾರ್ಥವಿಲ್ಲದೆ ಊಟ ಮಾಡುವುದಿಲ್ಲ. ಇಂಥ ಉಪವಾಸದ ಸಂದರ್ಭದಲ್ಲಿ ಕೆಲವರು ಆಹಾರವನ್ನು ಸ್ವಲ್ಪ ಮಾತ್ರ ಅಂಶಿಕವಾಗಿ ಸೇವಿಸುತ್ತಾರೆ ಹಾಗೂ ತಮಗಿಷ್ಟವಾದ ಮಾಂಸಹಾರ ಮತ್ತು ಇನ್ನಿತರ ಆಹಾರ ಪದಾರ್ಥವನ್ನು ತ್ಯಜಿಸಿ ಉಪವಾಸ ಪ್ರಾರ್ಥನೆ ಮಾಡುತ್ತಾರೆ. ಇದು ದೇವರ ದೃಷ್ಟಿಯಲ್ಲಿ ಇಷ್ಟವಾದ ಉಪವಾಸ ಪ್ರಾರ್ಥನೆಯಾಗಿರುತ್ತದೆ.

4) **ಉಪವಾಸ ಪ್ರಾರ್ಥನೆಯನ್ನು ಯಾಕೆ ಮಾಡಬೇಕು :** ದಾನಿ. 9:1–3 ಇಸ್ರಾಯೇಲಿನ ದುರುವಸ್ಥೆಯ ಅವಧಿ ಮತ್ತು ಪುನರ್ ಸ್ಥಾಪನೆ ಬಗ್ಗೆ ತಿಳಿದುಕೊಳ್ಳಲು ಉಪವಾಸ ಪ್ರಾರ್ಥನೆ ಮಾಡಿದನು.

1) ಆಪತ್ತಿನಿಂದ ರಕ್ಷಿಸಲು (2 ಪೂರ್ವ. 20:1–3).

2) ಮಕ್ಕಳ ಆಶೀರ್ವಾದಕ್ಕಾಗಿ (1 ಸಮು. 1:10–18).

3) ದೇವರ ಆಜ್ಞೆ (ಯೋವೆ. 2:12).

4) ಸೇವೆಯಲ್ಲಿ ಬಲಹೊಂದಲು (ಮತ್ತಾ. 4:1–10, ಲೂಕ. 4:1–14).

ಆತನ (ಯೇಸು) ಬಾಸುಂಡೆಗಳಂದ ನಿಮಗೆ ಗುಣವಾಯಿತು
(1 ಪೇತ್ರ. 2:24).

5) ದೇವರಿಗೆ ಉಪವಾಸ ಪ್ರಾರ್ಥನೆ ಇಷ್ಟ (ಯೆಶಾ. 58:7).

6) ಕಳಕೊಂಡದ್ದನ್ನು ತಿರುಗಿ ಪಡೆದುಕೊಳ್ಳಲು (ವಿಮೋ. 34:27–28).

7) ಸಭೆಯಲ್ಲಿ ಹಸ್ತಾರ್ಪಣೆ ಮಾಡುವಾಗ ಸೇವೆಗಾಗಿ ಯಾರನ್ನಾದರೂ ಪ್ರತ್ಯೇಕಿಸುವಾಗ ಉಪವಾಸ ಮಾಡಿ ದೇವರು ಆರಿಸುವ ವ್ಯಕ್ತಿಯನ್ನು ಗುರುತಿಸಿ ಹಸ್ತಾರ್ಪಣೆ ಮಾಡಲು (ಅ.ಕೃ. 13:1–4).

8) ದೇವರ ಸೇವೆಮಾಡಲು (ಲೂಕ. 2:37).

9) ಕೇಡಿನಿಂದ ತಪ್ಪಿಸಿಕೊಳ್ಳಲು (ಯೋನ. 3:1–10).

**5) ಯಾರೊಂದಿಗೆ ಸೇರಿ ಉಪವಾಸ ಪ್ರಾರ್ಥನೆ ಮಾಡಬೇಕು:**

1) ವೈಯಕ್ತಿಕವಾಗಿ (ಧರ್ಮೋ. 9:18).

2) ಕುಟುಂಬವಾಗಿ (ಯೆಹೋ. 24:15, ಅ.ಕೃ. 10:1–4).

3) ಸಭೆಯಾಗಿ (ಅ.ಕೃ. 14:23).

6) ಉಪವಾಸ ಪ್ರಾರ್ಥನೆಯನ್ನು ಮಾಡುವ ವಿಧಾನಗಳು ಯಾವುವು?

1) ಪವಿತ್ರಾತ್ಮನಿಂದ ಪ್ರೇರೇಪಿಸಲ್ಪಡಬೇಕು (ಲೂಕ. 4:1–2).

2) ಪಾಪಕ್ಕೆ ಪಶ್ಚಾತ್ತಾಪಪಡಬೇಕು (ಯೋವೆ. 2:12).

3) ಉಪವಾಸ ಮಾಡುವಾಗ ಪ್ರಾರ್ಥನೆಯನ್ನು ಕಡ್ಡಾಯವಾಗಿ ಮಾಡಬೇಕು (ದಾನಿ. 9:3).

4) ಉಪವಾಸ ಮಾಡುವಾಗ ಹೆಚ್ಚಾಗಿ ದೇವರ ವಾಕ್ಯವನ್ನು ಓದಿ ಧ್ಯಾನಿಸಬೇಕು (ನೆಹೆ. 9:1–4, ದಾನಿ. 9:1–3).

5) ಅಂತರಂಗವಾಗಿ ಉಪವಾಸ ಪ್ರಾರ್ಥನೆ ಮಾಡಬೇಕು (ಮತ್ತಾ. 6:16–18).

6) ಕರ್ತನನ್ನು ಆಶ್ರಯಿಸಿ ಉಪವಾಸ ಪ್ರಾರ್ಥನೆಮಾಡಬೇಕು (2 ಪೂರ್ವ. 20:1–3).

7) ಒಂದು ಉದ್ದೇಶ ಇಟ್ಟು ಉಪವಾಸ ಪ್ರಾರ್ಥನೆ ಮಾಡಬೇಕು (ಎಜ್ರ. 8:21–23, ಅ.ಕೃ. 13:1–4).

8) ದೀನತೆಯೊಂದಿಗೆ ಉಪವಾಸ ಮಾಡಬೇಕು (1 ಅರ. 21:27–29, ಯೋನ. 3:1–10).

9) ತಾಳ್ಮೆಯೊಂದಿಗೆ ಉಪವಾಸ ಪ್ರಾರ್ಥನೆ ಮಾಡಬೇಕು (2 ಕೊರಿ. 6:5).

10) ನಂಬಿಕೆಯೊಂದಿಗೆ ಉಪವಾಸ ಪ್ರಾರ್ಥನೆ ಮಾಡಬೇಕು (ಇಬ್ರಿ. 11:6, 1 ಸಮು. 1:10–18, 2:21).

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

# ಸ್ಥಳೀಯ ಮತ್ತು ವಿದೇಶ ಸುದ್ಧಿ

* ಅನ್ನ ಭಾಗ್ಯ : ಅಕ್ಕಿ ವಿತರಣೆ ಆರಂಭ:– ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆ ಪ್ರಕಾರ, ಕೆ.ಜಿ.ಗೆ. 1 ರೂಪಾಯಿ ಅಕ್ಕಿ ವಿತರಣೆ ಜಿಲ್ಲೆಯಲ್ಲಿ ಆರಂಭಗೊಂಡಿದೆ. ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಅಕ್ಕಿ ವಿತರಣೆ ನಡೆಯುತ್ತಿದೆ. ಒಬ್ಬನಿಗೆ 10 ಕಿಲೊ ಅಕ್ಕಿ, ಇಬ್ಬರಿಗೆ 20 ಕಿಲೊ, ಮೂರು ಅಥವಾ ಅದಕ್ಕಿಂತ ಅಧಿಕ ಸದಸ್ಯರಿದ್ದರೆ 30 ಕಿಲೊ ಅಕ್ಕಿ ವಿತರಿಸಲಾಗುತ್ತದೆ.

* ಭಾರತದ ಕೈಗಾರಿಕಾ ಸಚಿವರ ಹೆಸರು ತಪ್ಪು ಪ್ರಕಟಿಸಿದ ವಿಶ್ವಸಂಸ್ಥೆ ! ಭಾರತಕ್ಕೆ ಹೂಡಿಕೆ ಆಕರ್ಷಿಸಲು ಉನ್ನತ ಮಟ್ಟದ ನಿಯೋಗದೊಂದಿಗೆ ಆಗಮಿಸಿರುವ ಕೈಗಾರಿಕಾ ಆನಂದ ಶರ್ಮಾ ಅವರ ಹೆಸರಿನ ಬದಲಿಗೆ ವಿಶ್ವಸಂಸ್ಥೆ ಮಾಧ್ಯಮ ವಿಭಾಗ ಕಮಲ್‌ನಾಥ್ ಹೆಸರು ಪ್ರಕಟಿಸಿದ ಘಟನೆ ಜರುಗಿದೆ.

* ಇಡೀ ಜಗತ್ತಿನಲ್ಲಿ ಭಾರತವೊಂದೇ ಯುವ ದೇಶ. ಜಪಾನ್ ಮತ್ತು ಚೀನಾಗಳ ಆಯುಷ್ಯ ತೀರುತ್ತಿದೆ. ಅಮೆರಿಕವಂತೂ ಬಂಜೆಯಾಗುತ್ತಿರುವ ರಾಷ್ಟ್ರ.

* ನೆರೆಯಿಂದ ತತ್ತರಿಸಿರುವ ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದ್ದು, ಸಾವಿನ ಸಂಖ್ಯೆ 150ಕ್ಕೂ ಹೆಚ್ಚಿದೆ. ಇದುವರೆಗೆ ಅಸ್ಸಾಂನ 11 ಜಿಲ್ಲೆಗಳು ಪ್ರವಾಹ ಪೀಡಿತವಾಗಿದ್ದು, 350 ಹಳ್ಳಿಗಳು ಜಲಾವೃತ್ತಗೊಂಡಿವೆ.

* ಉತ್ತರಾಖಂಡದಲ್ಲಿ ಸಾವಿರಾರು ಜನ ಬಲಿತೆಗೆದುಕೊಂಡ ವರುಣದೇವ ಇದೀಗ ಪರಿಹಾರ ಕಾರ್ಯ ಕೈಗೊಳ್ಳಲು ಅಡ್ಡಿ ಪಡಿಸಲಾರಂಭಿಸಿದ್ದಾನೆ. ಕಳೆದ ಎರಡು ದಿನಗಳಿಂದ ಇಲ್ಲಿ ಧಾರಾಕಾರ ಮಳೆಯಾಗುತ್ತಿರುವುದರಿಂದ ಆಹಾರ ಸಾಮಗ್ರಿಗಳನ್ನು ಹೊತ್ತ ಹೆಲಿಕಾಪ್ಟರ್, ಟ್ರಕ್‌ಗಳು ಚಲಿಸದೆ ನಿಂತಲ್ಲೇ ನಿಲ್ಲುವಂತಾಗಿದೆ.

ನಾನು (ಯೇಸು) ಯಾರಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ (ಪ್ರಕ. 3:19).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

# ದೇವರು ಅದ್ಭುತ ಮಾಡುವನು

ಲಾಜರನು ಅಸ್ವಸ್ಥನಾಗಿದ್ದನು. ಅದು ಎಂಥ ಅಸ್ವಸ್ಥತೆ ಎಂದು ನಮಗೆ ಗೊತ್ತಿಲ್ಲ ಆದರೆ ಅದು ಮರಣಕ್ಕೆ ನೆಡಸುವಂಥ ಅಸ್ವಸ್ಥತೆಯಾಗಿತ್ತು. ಕ್ರಿಸ್ತನಲ್ಲಿ ಪ್ರಿಯರೇ, ಇಂದು ನೀವು ಕೂಡ ಇದೇ ರೀತಿ ಅಸ್ವಸ್ಥತೆಯಿಂದ ಹಾಸಿಗೆಯಲ್ಲಿ ದೀರ್ಘಕಾಲ ಮಲಗಿದ ಅನುಭವದಲ್ಲಿ ಜೀವಿಸುತ್ತಿರಬಹುದು. ದೇವರ ವಾಕ್ಯ ಹೇಳುತ್ತದೆ, ಕೀರ್ತ. 46:1 ಕರ್ತನು ಇಕ್ಕಟ್ಟಿನಲ್ಲಿ ವಿಶೇಷ ಸಹಾಯಕನು. ಕೀರ್ತ. 50:15 ರಲ್ಲಿ ಕಷ್ಟ ಕಾಲದಲ್ಲಿ ನನಗೆ ಮೊರೆಯಿಡಿರಿ ನಾನು ನಿಮ್ಮನ್ನು ಬಿಡಿಸುವೆನು. ಅದು ಎಚ್.ಐ.ವಿ. (ಏಡ್ಸ್) ಕಾಯಿಲೆಯಾಗಿರಬಹುದು. ಕ್ಯಾನ್ಸರ್ ಕಾಯಿಲೆಯಾಗಿರಬಹುದು, ಟ್ಯೂಮರ್ ಅಥವಾ ಮಾನಸಿಕ ಅಸ್ವಸ್ಥತೆಯಾಗಿರಬಹುದು. ಕೀರ್ತ. 91:3 ರಲ್ಲಿ ಮರಣಕರವಾದ ವ್ಯಾಧಿಯಿಂದ ಕರ್ತನು ಗುಣಪಡಿಸುತ್ತಾನೆಂದು ತಿಳಿಸುತ್ತದೆ. ನೀನು ಮಲಗಿದ ಸ್ಥಳದಿಂದಲೇ ಕರ್ತನನ್ನು ಕೂಗಿ ಕರೆ. ಕೀರ್ತ. 145:8 ರಲ್ಲಿ ಕರ್ತನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವುದಾದರೆ ಹತ್ತಿರವಾಗಿಯೇ ಇದ್ದಾನೆ ಎಂದು ತಿಳಿಸುತ್ತದೆ. ಕ್ರಿಸ್ತನಲ್ಲಿ ಪ್ರಿಯರೇ, ನೀವು ಸೋತು, ಮನಗುಂದಿ, ನಿರಾಶರಾಗಬೇಡಿರಿ ನಿಮಗೊಂದು ನಿರೀಕ್ಷೆಯಿದೆ. ಅದು ಕರ್ತನಾದ ಯೇಸುಕ್ರಿಸ್ತನೇ ಆಗಿದ್ದಾನೆ. "ಯೆಹೋವನನ್ನು ನಿರೀಕ್ಷಿಸುವವರೇ ದೃಢವಾಗಿರಿ ನಿಮ್ಮ ಹೃದಯವು ಧೈರ್ಯದಿಂದಿರಲಿ (ಕೀರ್ತ. 31:24). ಯೋಹಾ. 11:2ರಲ್ಲಿ ಮಾರ್ಥ ಮತ್ತು ಮರಿಯಳ ಬಗ್ಗೆ ತಿಳಿಸುತ್ತದೆ. ಲೂಕ. 10:38–42ರಲ್ಲಿ ಮಾರ್ಥಳು ಸೇವೆಯ ನಿಮಿತ್ತವಾಗಿ ಚಟುವಟಿಕೆಯಲ್ಲಿ ನಿರತಳಾಗಿರುವುದನ್ನು ಮರಿಯಳು ಕರ್ತನಾದ ಯೇಸುಕ್ರಿಸ್ತನ ಪಾದದಲ್ಲಿ ಕೂತು ಆರಾಧಿಸಿ ವಾಕ್ಯ ಕೇಳುವುದನ್ನು ಕಾಣಬಹುದು. ಒಂದು ವೇಳೆ ಸಮಸ್ಯೆಯಲ್ಲಿರುವ ನಿನ್ನ ಕುಟುಂಬ ಕೂಡ ಇಂದು ಕರ್ತನ ಸೇವೆಯಲ್ಲಿ ಪ್ರಯಾಸಪಟ್ಟು ಕರ್ತನನ್ನು ಆರಾಧಿಸಿ ಆತನ ವಚನಗಳನ್ನು ಕೇಳಿ ಅನುಸರಿಸುವಂಥ ಕುಟುಂಬ ನಿನ್ನ ಕುಟುಂಬವಾಗಿರಬಹುದು. ಯೋಹಾ. 11:3ರಲ್ಲಿ ಮಾರ್ಥ ಮರಿಯಂದಿರು ನಿನ್ನ ಸ್ನೇಹಿತನಾದ ಲಾಜರನಿಗೆ ಆರೋಗ್ಯ ಸರಿಯಿಲ್ಲ ಎಂಬ ಸಂದೇಶವನ್ನು ಕಳುಹಿಸುವುದನ್ನು ನಾವು ಕಾಣಬಹುದು. ಲಾಜರನು ಕರ್ತನ ಸ್ನೇಹಿತನಾಗಿದ್ದನೆಂದು ತಿಳಿಯುತ್ತೇವೆ. ಸ್ನೇಹಿತನಿಗೆ ಕೆಲವು ವಿಶೇಷತೆಗಳಿರುತ್ತವೆ :–

1) ಸ್ನೇಹಿತನು ತನ್ನ ಸ್ನೇಹಿತನಿಗೋಸ್ಕರ ಪ್ರಾಣವನ್ನು ಕೊಡುತ್ತಾನೆ (ಯೋಹಾ. 15:13).

2) ಎಲ್ಲಾ ರಹಸ್ಯಗಳನ್ನು ತೀಳಿಸುತ್ತಾನೆ (ಯೋಹಾ. 15:15).

3) ಮಿತ್ರನು ಮಿತ್ರನಿಗೆ ಕೆಲವು ಗಾಯಗಳನ್ನು ಮೇಲಿಗಾಗಿಯೇ ಮಾಡುತ್ತಾನೆ (ಜ್ಞಾನೋ. 27:6).

4) ಮಿತ್ರನು ಮಿತ್ರನ ಬುದ್ಧಿಯನ್ನು ಹರಿತ ಮಾಡುವನು (ಜ್ಞಾನೋ. 27:17).

5) ಮಿತ್ರರಲ್ಲಿ ನಂಬಿಗಸ್ಥಿಕೆಯ ಗುಣ ಇರುತ್ತದೆ (ಜ್ಞಾನೋ. 20:6).

**ಕರ್ತನ ಸ್ನೇಹ ಯಾರಿಗೆ ಸಿಗುತ್ತದೆ**

1) ಕರ್ತನ ಆಜ್ಞೆಗಳಿಗೆ ಸರಿಯಾಗಿ ನಡೆದರೆ ಕರ್ತನ ಸ್ನೇಹ ದೊರಕುತ್ತದೆ (ಯೋಹಾ. 15:14).

2) ಹೃದಯ ಶುದ್ಧಿಯನ್ನು ಅಪೇಕ್ಷಿಸುವ ಸವಿ ಮಾತನಾಡುವವರಿಗೆ ಕರ್ತನ ಸ್ನೇಹ ದೊರಕುತ್ತದೆ (ಜ್ಞಾನೋ. 22:11).

3) ಯಥಾರ್ಥರಿಗೆ ಕರ್ತನ ಸ್ನೇಹ ದೊರಕುತ್ತದೆ (ಜ್ಞಾನೋ. 3:32).

4) ಆ ದಿನಗಳು ಅಂದರೆ (ಯೋಬ. 29:4, 1:1–5,8 ರ ದಿನಗಳು

ಎ) ದೇವರಲ್ಲಿ ಭಯಭಕ್ತಿ

ಬಿ) ಕೆಟ್ಟದ್ದನ್ನು ನಿರಾಕರಿಸುವುದು

ಸಿ) ನಿರ್ದೋಷಿಯೂ

ಡಿ) ಯಥಾರ್ಥಚಿತ್ತನೂ

ಇ) ಪ್ರತಿದಿನ ಯಜ್ಞವನ್ನರ್ಪಿಸುತ್ತಿದ್ದನು.

ಮೇಲಿನ ವಚನಗಳಲ್ಲಿ ಲಾಜರನು ಕರ್ತನಾದ ಯೇಸುಕ್ರಿಸ್ತನ ಸ್ನೇಹಿತನು ಎಂದು ತಿಳಿದುಕೊಳ್ಳಬಹುದು. ಅಂದರೆ ಮೇಲಿನ ವಚನಗಳಲ್ಲಿರುವ ಪ್ರತಿಯೊಂದು ಗುಣಗಳು ಲಾಜರನಲ್ಲಿದ್ದವು. ಈಗ ಮಾರ್ಥ ಮರಿಯಳು ಕರ್ತನಿಗೆ ನಿನ್ನ ಸ್ನೇಹಿತನಿಗೆ ಆರೋಗ್ಯವಿಲ್ಲವೆಂದು ಹೇಳಿ ಕಳುಹಿಸುತ್ತಿದ್ದಾರೆ. ಇಂದು ನೀನು ಮಾತ್ರವಲ್ಲ ನಿನಗಾಗಿ ನಿನ್ನ ಹೆಂಡತಿ, ಗಂಡ, ಮಕ್ಕಳು, ತಂದೆ

ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮ್ಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ
ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು (2 ಕೊರಿ. 5:15).

ತಾಯಿ, ಸ್ನೇಹಿತರು, ಸತತವಾಗಿ ಪ್ರಾರ್ಥಿಸುತ್ತಿರಬಹುದು. "ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥಿಸಿರಿ ಎಂದು ಕರ್ತನು ಹೇಳಿದ್ದಾನೆ (ಲೂಕ. 18:1). ಯೋಹಾ. 11:4 ರಲ್ಲಿ ಕರ್ತನು ಅದಕ್ಕೆ ಕೊಡುವ ಉತ್ತರ ಈ ರೋಗ ಮರಣಕ್ಕಾಗಿ ಬಂದದ್ದಲ್ಲ ಇದರಿಂದ ದೇವಕುಮಾರನಿಗೆ ಮಹಿಮೆ ಉಂಟಾಗಲಿದೆ ಎಂದು ತಿಳಿಸುವುದನ್ನು ಕಾಣಬಹುದು. ನಿನ್ನ

ಕಾಯಿಲೆಯ ಮೂಲಕ ನೀನು ಸತ್ತುಹೋಗುತ್ತಿ ಎಂದು ನೀನು ನೆನಸುತ್ತಿರಬಹುದು ಅಥವಾ ನಿನ್ನ ಕುಟುಂಬದವರು, ನಿನ್ನ ವೈದ್ಯರು ಹೇಳುತ್ತಿರಬಹುದು. ಆದರೆ ಕರ್ತನು ಹೇಳುತ್ತಾನೆ, ನೀನು ಸಾಯಲ್ಲ ಅದರ ಮೂಲಕ ಆತನಿಗೆ ಮಹಿಮಯಾಗಲಿದೆ. ನೀನು ಎಷ್ಟೇ ಬಲಹೀನನಾದರೂ ಸೋತು ಹೋಗಬೇಡ, ನಿರಾಶನಾಗಬೇಡ, ನಿರೀಕ್ಷೆ ಕಳಕೊಳ್ಳಬೇಡ ಕರ್ತನು ನಿನಗಾಗಿ ನಿಶ್ಚಯವಾಗಿ ಇಳಿದು ಬಂದು ಅದ್ಭುತಮಾಡುವನು. ಯೋಹಾ. 11:5–6 ಮಾರ್ಥ ಮರಿಯ, ಲಾಜರರಲ್ಲಿ ಕರ್ತನಿಗೆ ತುಂಬಾ ಪ್ರೀತಿ ಇತ್ತು ಆದರೂ ಲಾಜರ ಅಸ್ವಸ್ಥನಾಗಿರುವ ಸುದ್ದಿ ಕೇಳಿ ಕರ್ತನು ತಕ್ಷಣ ಹೋಗಲಿಲ್ಲ. ಕೆಲವು ಸಲ ನಾವು ಪ್ರಾರ್ಥಿಸುವಾಗ ತಕ್ಷಣ ಉತ್ತರ ಸಿಗಲಿಕ್ಕಿಲ್ಲ ಆದರೂ ನಾವು ನಿರಾಶನಾಗಬಾರದು. ಪ್ರಸ. 3:1 ಆಕಾಶದ ಕೆಳಗೆ ನಡೆಯುವ ಪ್ರತಿಯೊಂದು ಕಾರ್ಯಕ್ಕೂ ಒಂದೊಂದು ಸಮಯವಿದೆ. ಯೆಶಾ. 54:7 ಕ್ಷಣಮಾತ್ರ ನಿನ್ನನ್ನು ಬಿಟ್ಟಿದ್ದೆನು ಮಹಾಕೃಪೆಯಿಂದ ಸೇರಿಸಿಕೊಳ್ಳುವೆನು. ಲೂಕ. 18:7 ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆ ಇಡುವಲ್ಲಿ ಆತನು ಅವರ ವಿಷಯದಲ್ಲಿ ತಡಮಾಡಿದರೂ ಅವರ ನ್ಯಾಯವನ್ನು ತೀರಿಸದೆ ಇರುವನೇ? ಅವರಿಗೆ ಬೇಗ ನ್ಯಾಯತೀರಿಸುವನೆಂದು ನಿಮಗೆ ಹೇಳುತ್ತೇನೆ. ನಿನ್ನ ಬಿಡುಗಡೆಯ ಕುರಿತು ಕರ್ತನು ತಡಮಾಡುವಂತದ್ದು ಅದು ನಿನ್ನ ಒಳ್ಳೆಯದಕ್ಕಾಗಿಯೇ ರೋಮ. 8:28, ಯೆರೆ. 29:11–13 ನಿನ್ನ ವಿಷಯದಲ್ಲಿ ಕರ್ತನು ಮಾಡುವ ಆಲೋಚನೆಗಳು ಅಹಿತದ ಆಲೋಚನೆಗಳಲ್ಲ ಹಿತದ ಆಲೋಚನೆಗಳೇ. ಯೋಹಾ. 11:7–16 ಕರ್ತನು ತನ್ನ ಶಿಷ್ಯರನ್ನು ಪ್ರೋತ್ಸಾಹಪಡಿಸಿ ಯೂದಾಯಕ್ಕೆ ಹೋರಾಡುವುದನ್ನು ಕಾಣಬಹುದು.

1. ಲಾಜರನು ಆಗಲೇ ಸತ್ತಿದ್ದನು.
2. ಯೆಹೂದ್ಯರು ಕರ್ತನನ್ನು ಕಲ್ಲೆಸೆದು ಕೊಲ್ಲುವ ಯೋಜನೆಯಲ್ಲಿದ್ದರು.
3. ಕರ್ತನು ಸಮಯಕ್ಕೆ ಸರಿಯಾಗಿ ಕೆಲಸವನ್ನು ಮಾಡುವಾತನಾಗಿದ್ದಾನೆ.
4. ನಿನ್ನ ಜೀವಿತದಲ್ಲಿ ಸತ್ತಂತಹ ಕಾರ್ಯಗಳಿಗೆ ಆತನಿಂದ ಜೀವಕೊಡಲು ಸಾಧ್ಯ.

ಲಾಜರನ ಜೀವಿತದಲ್ಲಿ ಅದ್ಭುತ ನಡೆಯಲು ಕಾರಣವೇನು

1) ಮಾರ್ಥಳು ಕರ್ತನನ್ನು ಎದುರುಗೊಂಡಳು (ಯೋಹಾ. 11:20).
2) ಮಾರ್ಥಳು ನಂಬಿಕೆಯ ಅರಿಕೆಯ ಮಾಡಿದಳು (ಯೋಹಾ. 11:22).
3) ಕರ್ತನನ್ನು ಕ್ರಿಸ್ತನೆಂದು ನಂಬಿದಳು (ಯೋಹಾ. 11:27).
4) ಮರಿಯಳು ತನ್ನ ನಂಬಿಕೆಯನ್ನು ಅರಿಕೆ ಮಾಡಿದಳು (ಯೋಹಾ. 11:32).

ಮೇಲಿನ 4 ಸಂಗತಿಗಳು ನಮ್ಮ ಜೀವಿತದಲ್ಲಿದ್ದರೆ ನಾವೂ ಕೂಡ ಅದ್ಭುತಗಳನ್ನು ಕಾಣಲು ಸಾಧ್ಯವಾಗುತ್ತದೆ. ಕರ್ತನು ನಿಮ್ಮನ್ನು ಆಶೀರ್ವದಿಸಿ ಮಾರ್ಕ, ಮರಿಯ, ಲಾಜರರ ಜೀವಿತದಲ್ಲಿ ನಡೆದ ಅದ್ಭುತವನ್ನು ನಿಮ್ಮ ಜೀವಿತದಲ್ಲಿಯೂ ನಡೆಸಲಿ ಎಂದು ಪ್ರಾರ್ಥಿಸುತ್ತೇವೆ ಹಲ್ಲೆಲೂಯ.

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ಬಾನಿನಲ್ಲಿ ಸತ್ಯವೇದ

ಮೊಟ್ಟ ಮೊದಲು ಬಾಹ್ಯಾಕಾಶದಲ್ಲಿ ರ‍್ಯಾಕೆಟ್‌ನಲ್ಲಿ ತೆಗೆದುಕೊಂಡು ಹೋದ ಪುಸ್ತಕ ನಮ್ಮ ಸತ್ಯವೇದವೇ. ಮೈಕ್ರೋಫಿಲಂ ಆಗಿ ಅದು ಅಪೊಲ್ಲೊ 8ರಲ್ಲಿ ಕೊಂಡೊಯ್ಯಲ್ಪಟ್ಟಿತು. ಸತ್ಯವೇದದ ಮೊದಲನೇ ವಾಕ್ಯವಾದ ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನೂ ಉಂಟು ಮಾಡಿದನು ಎಂಬ ವಾಕ್ಯವು ರಾಕೆಟ್‌ನಲ್ಲಿ ಓದಲಾದ ಮೊದಲ ವಾಕ್ಯ. ಪೋರ್‌ಮನ್ ಎಂಬುವನು 1968ನೇ ವರ್ಷ ಅಪೊಲ್ಲೋ ರಾಕೆಟ್‌ನಿಂದ ಇದನ್ನು ಓದಿದನು.

ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ; ಬೆಳ್ಳಿ ಬಂಗಾರಕ್ಕಿಂತಲೂ ಸತ್ಕೀರ್ತಿಯು ಅಮೂಲ್ಯ (ಜ್ಞಾನೋ. 22:1).

# ಯೌವನಸ್ಥರ ಸ್ವರ ಪವಿತ್ರಾತ್ಮನೊಂದಿಗೆ ನಡೆ

ನಮ್ಮ ಕರ್ತನೂ ರಕ್ಷಕನೂ ಆದ ಯೇಸುಕ್ರಿಸ್ತನ ನಾಮದಲ್ಲಿ ಈ ಯೌವನಸ್ಥರ ಸಂಚಿಕೆಯ ಮೂಲಕ ನಿಮ್ಮೆಲ್ಲರನ್ನು ಸಂಧಿಸುವಂತಹ ಅವಕಾಶವನ್ನು ಕೊಟ್ಟ ಸರ್ವಶಕ್ತನಿಗೆ ವಂದನೆಗಳು ಮತ್ತು ನಿಮಗೆಲ್ಲರಿಗೂ ನನ್ನ ಪ್ರೀತಿಯ ವಂದನೆಗಳು.

ಈಗಾಗಲೇ ನಾವು ನೋಡುತ್ತಾ ಹಾಗೂ ಕಲಿಯುತ್ತಾ ಬಂದ ಹಾಗೆ ಪವಿತ್ರಾತ್ಮನೊಂದಿಗಿನ ನಡೆ ಕೇವಲ ಧಾರ್ಮಿಕವಾಗಿಯೋ ನಮಗನಿಸದ ಹಾಗೆ ಇರದೇ ಅದು ಸತ್ಯವನ್ನು ತಿಳಿದುಕೊಂಡು ಪವಿತ್ರಾತ್ಮನೊಂದಿಗೆ ನಡೆಯುವುದು ಎಂಬುದನ್ನು ನಾವು ನೋಡುತ್ತಾ ಬಂದೆವು. ಹಾಗೆಯೇ ಪವಿತ್ರಾತ್ಮನೊಂದಿಗಿನ ನಡೆ ನಮ್ಮ ಆರಾಧನೆಯ ಮೂಲಕ ಎಂಬುದನ್ನು ಸಹಾ ನಾವು ಕಲಿತುಕೊಂಡೆವು.

ಈ ಸಂಚಿಕೆಯಲ್ಲಿ ಇನ್ನು ಕೆಲವು ಮೂಲಭೂತವಾದ ಸತ್ಯಗಳನ್ನು ನಾವು ಪವಿತ್ರಾತ್ಮನೊಂದಿಗೆ ಸೇರಿ ಕಲಿತುಕೋಳ್ಳೋಣ. ನೀವು ಸಿದ್ದರಿದ್ದೀರಾ? ಒಂದು ಪುಟ್ಟ ಪ್ರಾರ್ಥನೆಯನ್ನು ಮಾಡೋಣವೇ?

ಪ್ರಿಯ ಪವಿತ್ರಾತ್ಮನೇ, ನಿಮ್ಮೊಂದಿಗೆ ನಡೆಯುವುದನ್ನು ನನಗೆ ಕಲಿಸಿಕೊಡಿರಿ. ನಿಮ್ಮ ವಾಕ್ಯವನ್ನು ನನಗೆ ತಿಳಿಸಿರಿ ಮತ್ತು ನಿಮ್ಮ ಚಿತ್ತವನ್ನು ಕಲಿಸಿರಿ. ನಾನು ನಿಮ್ಮ ವಾಕ್ಯದ ಬೆಳಕಿನಲ್ಲಿ ಪ್ರತಿದಿನವೂ ನಡೆಯುವಂತೆ ನನ್ನನ್ನು ಮಾಡಿರಿ. ನಾನು ಮನುಷ್ಯರನ್ನು ಮೆಚ್ಚಿಸದೇ ಹಾಗೂ ನೀನು ನೇಮಿಸಿರುವ ಅಧಿಕಾರ ಮತ್ತು ಅಭಿಷಿಕ್ತರನ್ನು ಕೀಳಾಗಿ ನೋಡದೆ, ನನಗೆ ನೀನು ಕೊಟ್ಟಿರುವ ಅಭಿಷೇಕವನ್ನು ಕಡೆಗಣಿಸದೇ ನಿನ್ನೊಂದಿಗೆ ನಡೆಯುವುದನ್ನು ದಯವಿಟ್ಟು ನನಗೆ ಕಲಿಸಿರಿ. ಇದರ ಮೂಲಕ ನಾನು ತಂದೆಯಾದ ದೇವರನ್ನು ಮತ್ತು ನನ್ನ ಕರ್ತನಾದ ಯೇಸುಕ್ರಿಸ್ತನನ್ನು ಮಹಿಮೆಪಡಿಸಲು ಸಹಾಯ ಮಾಡಿರೆಂದು ಯೇಸುಕ್ರಿಸ್ತನ ನಾಮದಲ್ಲಿ ಕೇಳಿಕೊಳ್ಳುತ್ತೇನೆ, ತಂದೆಯೇ ಆಮೆನ್.

ಕೆಲವರಿಗೆ ಪವಿತ್ರಾತ್ಮನೊಂದಿಗೆ ನಡೆಯುವುದೆಂದರೆ, ತಮ್ಮ ಕೆಲಸವನ್ನು ಮಾಡುವ ಆಳಿನ ಹಾಗೆ ಎಂದು ತಿಳಿದುಕೊಂಡಿದ್ದಾರೆ. ಅದು ಅವರ ದಡ್ಡತನವೆಂದು ಹೇಳಬೇಕೋ ಅಥವಾ ಮೂರ್ಖತನವೆಂದು ಹೇಳಬೇಕೋ ತಿಳಿಯದು. ಕೆಲವರು ಅವರು ಮೂರ್ಖತನದ ಪರಮಾವಧಿಯಲ್ಲಿದ್ದಾರೆ. ಅದರ ಅಪಾಯ ಏನೆಂಬುದನ್ನು ಅರಿಯದೆ ಇದ್ದಾರೆ. ಪವಿತ್ರಾತ್ಮನು ನಾವು ಯೋಚಿಸಿವುದಕ್ಕಿಂತಲೂ ತಿಳಿದಿರುವುದಕ್ಕಿಂತಲೂ ಅತೀ ಶ್ರೇಷ್ಠನಾಗಿದ್ದಾನೆಂಬುದನ್ನು ನಾವು ಎಂದಿಗೂ ಮರೆಯಲೇ ಕೂಡದು. ದೇವರ ವಾಕ್ಯವು ಯೋಹಾನ 14:26ರಲ್ಲಿ ಹೇಳುವಂತೆ, "ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ರಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು. ಪವಿತ್ರಾತ್ಮನು ನಮಗೆ ಸಹಾಯಕನು ನಿಜ, ಆದರೆ ಆತನು ನಮ್ಮ ಮನೆಕೆಲಸದವನ ಹಾಗೆ ಅಲ್ಲ ಎನ್ನುವುದನ್ನು ನಾವು ಮರೆಯಕೂಡದು.

ನಿಮ್ಮ ನಡೆ ಪವಿತ್ರಾತ್ಮನೊಂದಿಗೆ ಸದಾಕಾಲ ಇರಬೇಕೆಂದು ಬಯಸುವುದಾದರೆ, ನೀವು:

**ಪವಿತ್ರಾತ್ಮನನ್ನು ಅಂಗೀಕರಿಸಬೇಕು** : ಮತ್ತಾಯ 1:18ರಲ್ಲಿ ನಾವು ನೋಡುವಾಗ – ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಯಮಾಡಿರಲಾಗಿ ಅವರು ಕೂಡುವದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದದ್ದು ತಿಳಿದುಬಂತು. ಆಗಿನ ಕಾಲದಲ್ಲಿ ಪವಿತ್ರಾತ್ಮನ ಅನುಭವ, ಭೋಧನೆ ಬಹಳ ವಿರಳವಾಗಿತ್ತು ಮತ್ತು ಯಾರೂ ಸಹಾ ಅಂತಹ ಅನುಭವಸ್ಥರು ಸಹಾ ಇರಲಿಲ್ಲ ಹಾಗೂ ತಿಳಿಸಿಕೊಡಲು ಇರಲಿಲ್ಲ. ಮೇಲಾಗಿ ಇಸ್ರಾಯೇಲ್ಯರ ಕನ್ಯೆಯರು ಇಂತಹ ವಿಚಿತ್ರವಾದ ಅನುಭವಕ್ಕಂತೂ ಸಿದ್ದರಿರಲಿಲ್ಲ ಎಂದು ನಾನು ವೈಯುಕ್ತಿಕವಾಗಿ ಭಾವಿಸುತ್ತೇನೆ. ಯೋಸೇಫನಿಗೆ ದೇವದೂತನು ಕಾಣಿಸಿಕೊಳ್ಳುವ ಮೊದಲು ಮರಿಯಳಿಗೆ ಕಾಣಿಸಿಕೊಂಡನು. ಹೇಗೆಂದರೆ, ಆರನೆಯ ತಿಂಗಳಲ್ಲಿ (ಸ್ನಾನಿಕನಾದ ಯೋಹಾನನ ತಾಯಿಯಾದ ಎಲಿಜಬೇತಳ ಗರ್ಭಕಾಲ) ದೇವರು ಗಬ್ರಿಯೇಲನೆಂಬ ತನ್ನ ದೂತನನ್ನು ಗಲಿಲಾಯ ಸೀಮೆಯ ನಜರೇತೆಂಬ ಊರಿಗೆ ಒಬ್ಬ ಕನ್ಯೆಯ ಬಳಿಗೆ ಕಳುಹಿಸಿದನು; ಆ ಕನ್ಯೆಯ ಹೆಸರು ಮರಿಯಳು; ಆಕೆಯು ದಾವೀದನ ಮನೆತನದ ಯೋಸೇಫನೆಂಬ ಪುರುಷನಿಗೆ ನಿಶ್ಚಿತಾರ್ಥವಾಗಿದ್ದಳು. ಆ ದೂತನು ಆಕೆಯ ಬಳಿಗೆ ಬಂದು – ದೇವರ ದಯೆ ಹೊಂದಿದವಳೇ, ನಿನಗೆ ಶುಭವಾಗಲಿ; ಕರ್ತನು ನಿನ್ನ ಸಂಗಡ ಇದ್ದಾನೆ ಅಂದನು. ಆಕೆಯು ಆ ಮಾತಿಗೆ ತತ್ತರಿಸಿ – ಇದೆಂಥ ಆಶೀರ್ವಾದ ಎಂದು ಯೋಚನೆಮಾಡುತಿರಲಾಗಿ ಆ ದೂತನು ಆಕೆಗೆ – ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊಕಿತು. ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಅತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು. ಇಂತಹ ಸಂಧರ್ಭದಲ್ಲಿ ಸ್ವಾಭಾವಿಕವಾಗಿ ಕನ್ಯೆಯು ಸ್ಥಿತಿಯನ್ನು ಹೊರಗಡೆಯಿಂದ ಆಲೋಚಿಸಿ. ಎಂಥಾ ಸಂಧಿಗ್ಧ ಪರಿಸ್ಥಿತಿಯನ್ನು ಆಕೆ ಎದುರಿಸಿರಬಹುದು. ಯಾಕೆಂದರೆ ಒಂದು ಕಡೆ ಕುಟುಂಬ, ಇನ್ನೊಂದು ಕಡೆ ನಿಶ್ಚಿತಾರ್ಥವಾದ ಪುರುಷ, ಮತ್ತೊಂದು ಕಡೆ ಆತನ ಕುಟುಂಬದವರು, ಮಗದೊಂದು ಕಡೆ ಸ್ನೇಹಿತರು, ಸಂಭಂಧಿಗಳು ಮತ್ತು ಇಡೀ ಸಮಾಜ!

ವಚನ 34ರಿಂದ, ಮರಿಯಳು ಆ ದೂತನನ್ನು – ಇದು

ಆರು ಇಕ್ಕಟ್ಟುಗಳಂದ ಆತನು ನಿನ್ನನ್ನು ಬಿಡಿಸುವನು; ಏಳನೆಯ ಇಕ್ಕಟ್ಟು ಉಂಟಾದರೂ ಯಾವ ಕೇಡೂ ನಿನ್ನನ್ನು ಮುಟ್ಟದು (ಯೋಬ. 5:19).

ಹೇಗಾದಿತು? ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದ್ದಕ್ಕೆ ದೂತನು – ನಿನ್ನ ಮೇಲೆ ಪವಿತ್ರಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು; ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು. ವಚನ 38 ರಲ್ಲಿ, ಆಗ ಮರಿಯಳು – ಇಗೋ, ನಾನು ಕರ್ತನ ದಸಿ; ನಿನ್ನ ಮಾತಿನಂತೆ ನನಗಾಗಲಿ ಅಂದಳು. ಯೇಸುವಿನ ತಾಯಿಯಾಗ ಬೇಕಾಗಿರುವ ಮರಿಯಳು ತನ್ನ ಗರ್ಭದಲ್ಲಿ ಪವಿತ್ರ ಶಿಶು ಗರ್ಭಧರಿಸುವಂತೆ ಪವಿತ್ರಾತ್ಮನನ್ನು ಅಂಗೀಕರಿಸಬೇಕಾಯಿತು ಹಾಗೂ ಆಕೆ ತನ್ನ ಮನೆಯವರನ್ನಾಗಲೀ, ನಿಶ್ಚಿತಾರ್ಥವಾದ ಪುರುಷನನ್ನಾಗಲೀ, ಆತನ ಕುಟುಂಬವನ್ನಾಗಲೀ, ತನ್ನ ಸ್ನೇಹಿತರನ್ನಾಗಲೀ, ಸಂಬಂಧಿಕರನ್ನಾಗಲೀ, ಅಥವಾ ಸಮಾಜವನ್ನಾಗಲೀ ಲೆಕ್ಕಿಸದೇ ಪವಿತ್ರಾತ್ಮನನ್ನು ಆಕೆ ತನ್ನ ಜೀವಿತದಲ್ಲಿ ಅಂಗೀಕರಿಸಿದಳು. ಮಾತ್ರವಲ್ಲದೇ ಪವಿತ್ರಾತ್ಮನು ಆಕೆಯ ಜೀವಿತದಲ್ಲಿ, ಆಕೆಯ ದೇಹದಲ್ಲಿ ಮಾಡುವ ಎಲ್ಲ ಬದಲಾವಣೆಗಳಿಗೆ ತನ್ನನ್ನು ಸಮರ್ಪಿಸಿಕೊಟ್ಟಳು. ಇಲ್ಲಿ ಮರಿಯಳು ತನ್ನ ಗರ್ಭದಲ್ಲಿ ಯೇಸುವನ್ನು ಗರ್ಭದರಿಸಬೇಕೆಂದಿದ್ದರೆ, ಪವಿತ್ರಾತ್ಮನನ್ನು ಅಂಗೀಕರಿಸಲೇಬೇಕಾಗಿತ್ತು.

ಮುಂದುವರೆಯುವುದು..........

ಕರ್ತನಾದ ಯೇಸುಕ್ರಿಸ್ತನಲ್ಲಿ ನಿಮ್ಮವ

**– ಸಭಾ॥ ಜಾನ್ ಸ್ಟೀಫನ್ ಮೊಂತೆರೋ**

---

**ಹೇಳಿಕೆಗಳು :** ಪ್ರಾರ್ಥನೆಯಲ್ಲಿ ಕಟ್ಟಿದ ಕುಟುಂಬ

ರಾಬರ್ಟ್ ನ್ಯೂಟನ್ ಎಂಬ ಬೋಧಕರು ವಿವಾಹವಾದ ದಿನದಿಂದಲೂ ಕುಟುಂಬ ಪ್ರಾರ್ಥನೆಗೆ ಬಹಳ ಆದ್ಯತೆ ನೀಡಿದರಂತೆ. ಆದರಿಂದ ತನ್ನ ಪತ್ನಿಯೊಂದಿಗೆ ಪ್ರತಿದಿನವೂ ಎರಡು ಹೊತ್ತು ದೇವ ಸನ್ನಿಧಾನದಲ್ಲಿ ಪ್ರಾರ್ಥಿಸುವದು ಅವರ ಅಭ್ಯಾಸಿಸುವಂತೆ ಹಾಗೆ ಪ್ರಾರ್ಥಿಸುವಾಗ ಒಬ್ಬರಿಗಾಗಿ ಒಬ್ಬರು ದೇವಸನ್ನಿಧಿಯಲ್ಲಿ ಬೇಡುತ್ತಿದ್ದರು. ಅವರ 50 ವರ್ಷಗಳ ದಾಂಪತ್ಯ ಜೀವನದಲ್ಲಿ ಒಂದು ದಿನವಾದರೂ ಅವರೊಳಗೆ ಯಾವುದೇ ಆದ ಮನಸ್ತಾಪಗಳು ಉಂಟಾದದ್ದೇ ಇಲ್ಲವೆಂದು ರೆವ. ರಾಬರ್ಟ್ ತನ್ನ ಅಂತ್ಯದ ದಿನಗಳಲ್ಲಿ ಹೀಗೆ ಹೇಳಿದ್ದಾರೆ. ಒಂದು ದಿನವೂ ಸಹ ನಾವು ಇಬ್ಬರೂ ಒಬ್ಬರಿಗೊಬ್ಬರು ಮನೆ ನೋಯುವಂತೆ ಯಾವ ಮಾತನ್ನೂ ಆಡಿದ್ದೇ ಇಲ್ಲ. ಎಷ್ಟು ಸಂತೋಷಕರವಾದ ಭಕ್ತರ ಕುಟುಂಬ ಜೀವಿತವಲ್ಲವೇ. ಪ್ರಾರ್ಥನೆಯು ಅವರನ್ನು ದೈವಿಕ ಪ್ರೀತಿಯಿಂದ ಬಂಧಿಸಿತ್ತು. ನಿಮ್ಮ ಮನೆಗಳಲ್ಲಿ ಉಂಟಾಗುವ ಮನಸ್ತಾಪಗಳಿಗೆ ಕಾರಣವೇನು? ನೀವು ಒಂದಾಗಿ ಕೂಡಿ ಪ್ರಾರ್ಥಿಸುವ ಅಭ್ಯಾಸವಿದೆಯೇ? ಪ್ರಾರ್ಥನೆಯಲ್ಲಿ ಒಬ್ಬರಿಗಾಗಿ ಒಬ್ಬರು ಪ್ರಾರ್ಥಿಸಿರುವಿರಾ? ಹಾಗಿಲ್ಲದಿದ್ದರೆ ಇಂದೇ ಪ್ರಾರ್ಥನೆಗೆ ಒಪ್ಪಿಸಿಕೊಡಿರಿ. ಆಗ ಕರ್ತನು ನಿಮ್ಮಲ್ಲಿ ಪ್ರೀತಿ, ಸಹಿಷ್ಣುತೆ, ತಾಳ್ಮೆಗಳನ್ನುಂಟು ಮಾಡುವನು.

**ದೇವರನ್ನು ಸಮೀಪಿಸಿರಿ!**

ಐಸಾಕ್ ನ್ಯೂಟನ್ ಒಬ್ಬ ಹೆಸರಾಂತ ವಿಜ್ಞಾನಿ. ದೇವಭಕ್ತಿಯುಳ್ಳವನು. ಒಮ್ಮೆ ಆತನ ಹೀಗೆ ಹೇಳಿದನು. ನಾನು ದೂರದರ್ಶಕ ಯಂತ್ರದ ಮೂಲಕ ನಕ್ಷತ್ರಗಳನ್ನೂ ಗ್ರಹಗಳನ್ನೂ ಪರೀಕ್ಷಿಸುತ್ತಿದ್ದಾಗ, ಅವುಗಳು ದೇವರ ಕೈ ಕೆಲಸಗಳನ್ನು ಜ್ಞಾಪಕಕ್ಕೆ ತಂದು, ದೇವರನ್ನು ಸಮೀಪಿಸಬೇಕೆಂಬ ಪ್ರೇರಣೆಯನ್ನು ನನ್ನೊಳಗೆ ತಂದಿತು! ನಕ್ಷತ್ರಗಳ ಮಹಿಮೆಯನ್ನು ಕಂಡ ನನಗೆ ದೇವರ ಮಹಿಮೆಯನ್ನು ಕಾಣಬೇಕೆಂಬ ಹಂಬಲ ಹೆಚ್ಚಾಯಿತು.

ನನ್ನ ಕೋಣೆಗೆ ಹೋಗಿ ಪ್ರಾರ್ಥಿಸುವಾಗ ಆ ಪ್ರಾರ್ಥನೆ ತಕ್ಷಣವೇ ಕ್ರಿಸ್ತನ ಪ್ರಸನ್ನತೆಯನ್ನು ತಂದಿತು. ದೂರದರ್ಶಕ ಯಂತ್ರ ದೂರದಲ್ಲಿರುವ ನಕ್ಷತ್ರಗಳನ್ನು ಅತಿ ಸಮೀಪದಲ್ಲಿರುವಂತೆ ತೋರಿಸುವದು. ಆದರೆ ಪ್ರಾರ್ಥನೆಯೋ ಧ್ರುವ ನಕ್ಷತ್ರವಾದ ಕ್ರಿಸ್ತನನ್ನು ನಮ್ಮ ಪಕ್ಕದಲ್ಲಿಯೇ ತಂದು ನಿಲ್ಲಿಸುವದು ಎಂದು ಸಂತಸಪಟ್ಟರು. ನೀವೂ ಪ್ರಾರ್ಥನೆಯ ಮೂಲಕ ಕರ್ತನನ್ನು ಸಮೀಪಿಸಿರಿ. ಆತ್ಮದಿಂದ ತುಂಬಿದ ಏಕಾಂತ ಪ್ರಾರ್ಥನೆ, ಜಜ್ಜಿದ ಹೃದಯದಿಂದ ಮಾಡಿದ ಪ್ರಾರ್ಥನೆ ಕಣ್ಣೀರಿನ ಪ್ರಾರ್ಥನೆ ನಿಶ್ಚಯವಾಗಿ ಕ್ರಿಸ್ತನ ಪ್ರಸನ್ನತೆಯನ್ನು ನಿಮ್ಮ ಬಳಿ ತರುವದು. ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ; ಆತುರದಿಂದ ಹುಡುಕುವವರು ನನ್ನನ್ನು ಕಂಡಕೊಳ್ಳುವರು (ಜ್ಞಾನೋ. 8:17).

**ತಾಳ್ಮೆಯು ಸಿದ್ಧಿಗೆ ಬರಲಿ**

ಒಮ್ಮೆ ಸಹೋ॥ ಡಿ.ಜಿ.ಎಸ್. ದಿನಕರ್‌ರವರು ಎಂದಿನಂತೆ ಬ್ಯಾಂಕಿನಲ್ಲಿ ತಮ್ಮ ಕೆಲಸದಲ್ಲಿ ನಿರತರಾಗಿದ್ದಾಗ ಅಲ್ಲಿಗೆ ಆಗಮಿಸಿದ ಒಬ್ಬ ವ್ಯಕ್ತಿಯೊಂದಿಗೆ ವ್ಯವಹರಿಸುತ್ತಿದ್ದ ವೇಳೆಯುಲ್ಲಿ ಇದ್ದಕ್ಕಿದ್ದಂತೆಯೇ ಆ ವ್ಯಕ್ತಿ ಅವರನ್ನು ಅವ್ಯಾಚ್ಯ ಶಬ್ದಗಳಿಂದ ಬೈಯಲು ಆರಂಭಿಸಿದರು. ಇಡೀ ಸಿಬ್ಬಂದಿ ವರ್ಗ ಮತ್ತು ಗ್ರಾಹಕರು ಬೆರಗಾಗಿ ಇದನ್ನು ಗಮನಿಸುತ್ತಿದ್ದರು. ಏನೆಲ್ಲಾ ಬೈಗುಳಗಳನ್ನು ಕೇಳಿಸಿಕೊಂಡರೂ ಸುಮ್ಮನೆ ತಾಳ್ಮೆಯಿಂದ ನಿಂತಿದ್ದ ಸಹೋದರರನ್ನು ನೋಡಿ, ಎಲ್ಲರೂ ನೀವು ಏಕೆ ಸುಮ್ಮನಿರುವಿರಿ ನಮಗೆ ಅವನನ್ನು ಥಳಿಸಿಬಿಡುವಷ್ಟು ಕೋಪ ಬರುತ್ತಿದೆ ಎಂದು ಕೇಳಿದರಂತೆ.

ಆಗ ಸಹೋದರರು ತಿಳಿಸಿದರು, ಕರ್ತನ ಬಳಿ ಹೋರಾಡಿ ಎಷ್ಟೋ ತಿಂಗಳುಗಳ ಕಾಲ ಉಪವಾಸವಿದ್ದು ಪ್ರಾರ್ಥಿಸಿ ಈ ತಾಳ್ಮೆಯನ್ನು ಪಡೆದುಕೊಂಡಿದ್ದೇನೆ. ಯಾರೋ ಒಬ್ಬ ಸಾಮಾನ್ಯ ಮನುಷ್ಯನು ಬಂದು ಅವನ ಮೂಲಕ ಸೈತಾನನು ಈ ತಾಳ್ಮೆಯನ್ನು ಕೆಡಿಸಲು ಪ್ರಯತ್ನಿಸಿದರೆ ನಾನು ಹೇಗೆ ಈ ಅಮೂಲ್ಯವಾದದ್ದನ್ನು ಕಳೆದುಕೊಳ್ಳಲಿ? ಎಂದು ಉತ್ತರಿಸಿದಾಗ ಎಲ್ಲರೂ ಸ್ತಬ್ಧರಾಗಿ ಹೋದರಂತೆ. ಆದುದರಿಂದ **"ನಿಮ್ಮ ತಾಳ್ಮೆಯು ಸಿದ್ಧಿಗೆ ಬರಲಿ ಆಗ ನೀವು ಶಿಕ್ಷಿತರು ಸರ್ವ ಗುಣವುಳ್ಳವರು ಆಗುವಿರಿ"** (ಯಾಕೋ. 1:4).

ಯೆಹೋವನು ನಮ್ಮನ್ನು ನೆನಪುಮಾಡಿಕೊಂಡಿದ್ದಾನೆ; ಸಣ್ಣವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರನ್ನೂ ಆಶೀರ್ವದಿಸುವನು (ಕೀರ್ತ. 115:13).

# ಸ್ವತಂತ್ರವಾಗಿ ಜೀವಿಸಲೆಂದು ಕರೆದ ದೇವರು

ನಮ್ಮ ಕರ್ತನಾದ ಯೇಸುಕ್ರಿಸ್ತನ ನಾಮದಲ್ಲಿ ಪ್ರಿಯ ದೇವರ ಸ್ವರ ಮಾಸಪತ್ರಿಕೆಯ ವಾಚಕರೆಲ್ಲರಿಗೂ ನಮ್ಮನ್ನು ದಾಸತ್ವದ ನೊಗದಿಂದ ಬಿಡಿಸಿ, ತಂದೆಯ ರಾಜ್ಯದೊಳಗೆ ಸ್ವತಂತ್ರರಾಗಿ ಜೀವಿಸಬೇಕೆಂದು ಕರೆದಿರುವ ನಮ್ಮ ಕರ್ತನಾದ ಯೇಸುಕ್ರಿಸ್ತನ ನಾಮದಲ್ಲಿ ನಿಮ್ಮೆಲ್ಲರಿಗೆ ಸ್ವಾತಂತ್ರ್ಯ ದಿನದ ಶುಭಾಶಯಗಳು. ಪ್ರಿಯರೇ ನಾವು ಈ ನಮ್ಮ ಭಾರತ ದೇಶವನ್ನು ಒಂದು ಸಾರಿ ನೋಡುವುದಾದರೆ ಎಲ್ಲಿ ನೋಡಿದರೂ ಕೊಲೆ, ಅನೀತಿ, ಹಗಲು ದರೋಡೆ, ಸುಲಿಗೆ, ಅನೇಕ ಸಂಕಟದಿಂದಲೂ, ಅನೇಕ ವೇದನೆಯಿಂದಲೂ, ಹಿಂಸೆಯಿಂದಲೂ ಭ್ರಷ್ಟಚಾರದಿಂದಲೂ ತುಂಬಿರುವ ಈ ಭಾರತ ದೇಶದ ಪರಿಸ್ಥಿತಿಯನ್ನು ನೋಡಿ ಸಹಿಸಲಾಗದ ಮಹನಿಯರು ನಮ್ಮ ದೇಶದ ಸ್ವತಂತ್ರಕ್ಕಾಗಿ ಹೋರಾಡಿದರು. ಬ್ರಿಟೀಷರಿಂದ, ಬ್ರಿಟೀಷರ ಧೊರೆತನದಿಂದ ಬಿಡಿಸಲು ಹಾಗೂ ಅವರ ಗುಲಾಮನತದಿಂದ ಬಿಡಿಸಲೆಂದು ಹೋರಾಡಿ ಭಾರತಿಯರನ್ನು ಅವರ ಕೈಯಿಂದ ತಪ್ಪಸಿದರು. ಮಾತ್ರವಲ್ಲದೇ ಭಾರತೀಯರಾದ ನಾವು ಯಾರ ಗುಲಾಮರಾಗಿರಬಾರದೆಂದು ತಮ್ಮ ಜೀವಿತವನೇ ಸ್ವಂತ್ರತಕ್ಕಾಗಿ ಮುಡಿಪಾಗಿ ಇಟ್ಟಂತಹ ಮಹನಿಯರನ್ನು ನಾವು ನಮ್ಮ ದೇಶದ ಚರಿತ್ರೆಯನ್ನು ಓದುವಾಗ ನೋಡುತ್ತೇವೆ. ಮಹನಿಯರುಗಳು ಯಾವ ರೀತಿಯಲ್ಲಿ ದೇಶಕ್ಕಾಗಿ ಹೋರಾಡಿ ಸ್ವಂತ್ರತವನ್ನು ನಮ್ಮದಾಗಿಸಿಕೊಂಡರು. ದೇವರಿಗೆ ಸ್ತೋತ್ರವಾಗಲಿ ಕ್ಷಣ ಮಾತ್ರದಿಂದ ಗತಿಸಿ ಹೋಗುವಂತಹ ಶರೀರಕ್ಕೆ ಸ್ವತಂತ್ರವನ್ನು ಗಳಿಸಿಕೊಟ್ಟಂತೆ ನಮ್ಮ ಕರ್ತನಾದ ಯೇಸುಕ್ರಿಸ್ತನು ನಾವು ಆತ್ಮೀಕ ರೀತಿಯಲ್ಲಿ ಮಾನವರಾದ ನಾವೆಲ್ಲರೂ ಸ್ವಂತತ್ರರಾಗಿರಬೇಕೆಂದು ಬಯಸಿ ಈ ಲೋಕಕ್ಕೆ ಮಾನವನಾಗಿ ನರಾವತಾರವೆತ್ತಿ ಬಂದನು. ಯೋಹಾ 1:14 "ಆ ವಾಕ್ಯವೆಂಬವನ್ನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ, ಸತ್ಯದಿಂದಲೂ ತುಂಬಿದವನು". ಮತ್ತು ಗಲಾತ್ಯ 5:1 "ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನನಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ. ದಾಸತ್ವದ ನೋಗದಲ್ಲಿ ತಿರುಗಿ ಸಿಕ್ಕಿಕೊಳ್ಳಬೇಡಿರಿ". ಹೀಗೆ ನಮ್ಮ ಕರ್ತನಾದ ಯೇಸುಕ್ರಿಸ್ತನು ನಮ್ಮಗಾಗಿ ತನ್ನ ಪ್ರಾಣವನ್ನು ಕೊಟ್ಟನು. ನಾವು ಇನ್ನು ಪಾಪವೆಂಬ ದಾಸತ್ವದಲ್ಲಿ ಸಿಲುಕಿ ನಾಶವಾಗಿ ಹೋಗಬಾರದೆಂದು ಹೋರಾಡಿ ತನ್ನನ್ನೇ ನಮಗೋಸ್ಕರ ಶಿಲುಬೆಯ ಕಂಬವನ್ನು ಏರಿದನು. ನಾವು ಬಿಡುಗಡೆಯನ್ನು ಹೊಂದಿ ಸ್ವಂತತ್ರರಾಗಿ ಜೀವಿಸಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನು ಮಾನವನಾಗಿ ಬಂದನು. ಆದರೆ ಈ ಲೋಕದ ದೇವರು ಮಾನವನ ಕಣ್ಣನು ಮಂಕುಮಾಡಿದ್ದಾನೆ. ನಾವು ನಮ್ಮ ತಂದೆಯ ಅನ್ಯೋನ್ಯತೆಯಿಂದ, ಆತನ ಸಮ್ಮುಖದಿಂದ ದೂರಹೋಗಿ ಪಾಪದ ಮಲಿನತ್ವದಿಂದ ದೇವರ ಪ್ರೀತಿಯನ್ನು ಅರಿತು ಕೊಳ್ಳದ ಹಾಗೆ ಸೈತಾನನು ಮಾನವನನ್ನು ಪಾಪದ ಕಟ್ಟಿನಿಂದಲೂ, ರೋಗದಿಂದಲೂ, ಶಾಪದಿಂದಲೂ, ಈ ಲೋಕದ ಸಂಗತಿಯಿಂದ ಬಂಧಿಸಿ ಆತ್ಮೀಕ ಮರಣವನ್ನು ಹೊಂದಿ ದೇವರ ಅನ್ಯೋನ್ಯತೆಯಲ್ಲಿ ಸೇರಬಾರದೆಂದು ದೇವರ ವಿಷಯದಲ್ಲಿ ತಿಳಿದುಕೊಳ್ಳದಂತೆ ಈ ಲೋಕವನ್ನು ಅವರ ಅರಿವನ್ನು ಸೈತಾನನ್ನು ಬಂಧಿಸಿ ಹಾಕಿದ್ದಾನೆ. ಈ ಬಂಧನದಿಂದ ಬಿಡಿಸಲು ಕರ್ತನಾದ ಯೇಸುಕ್ರಿಸ್ತನು ಈಗಲೂ ಸಹ ಕಾಯುತ್ತಿದ್ದಾನೆ. ನಾವು ಯಾರು ಸಹ ಬಂಧನದಲ್ಲಿ ಸಿಕ್ಕಿ ಕೊಳ್ಳಬಾರದೆಂಬುವುದೇ ದೇವರ ಇಷ್ಟವಾಗಿದೆ. ನಮ್ಮ ಕರ್ತನಾದ ಯೇಸು ಕ್ರಿಸ್ತನು ನಮ್ಮನ್ನು ಯಾವ ಸಂಗತಿಯಿಂದ ಬಿಡಿಸಲು ಈ ಲೋಕಕ್ಕೆ ಬಂದಿದ್ದಾನೆಂದು ನಾವು ಸ್ವಲ್ಪ ಮಟ್ಟಿಗೆ ಧ್ಯಾನಿಸುವ.

1. ಪಾಪದ ದಾಸತ್ವದಿಂದ ಬಿಡಿಸುವುದಕ್ಕಾಗಿ.
2. ಶಾಪದಿಂದ ಬಿಡಿಸುವುದಕ್ಕಾಗಿ.
3. ರೋಗದಿಂದ ಬಿಡಿಸುವುದಕ್ಕಾಗಿ.
4. ವೇದನೆಯಿಂದ ಬಿಡಿಸುವುದಕ್ಕಾಗಿ.
5. ನಿತ್ಯಮರಣದಿಂದ ಬಿಡಿಸುವುದಕ್ಕಾಗಿ.
6. ನಿತ್ಯವಾದ ಯಾತನೆಯಿಂದ ಬಿಡಿಸುವುದಕ್ಕಾಗಿ.
7. ನಿತ್ಯವಾದ ಕಣ್ಣೀರಿನಿಂದ ಬಿಡಿಸುವುದಕ್ಕಾಗಿ.
8. ನಿತ್ಯವಾದ ವೇದನೆಯಿಂದ ಬಿಡಿಸುವುದಕ್ಕಾಗಿ.
9. ನಿತ್ಯವಾದ ದಂಡನೆಯಿಂದ ಬಿಡಿಸುವುದಕ್ಕಾಗಿ.
10. ನಿತ್ಯವಾದ ಸಂಕಟದಿಂದ ಬಿಡಿಸುವುದಕ್ಕಾಗಿ.
11. ನಿತ್ಯವಾದ ನರಕದಿಂದ ಬಿಡಿಸುವುದಕ್ಕಾಗಿ.
12. ಹಗಲಿರುಳು ಉಪಶಮನವಿಲ್ಲದೆ ಇರುವವರನ್ನು ಬಿಡಿಸುವುದಕ್ಕಾಗಿ.

ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು, ಬಹು ದಿನದ ಮೇಲೆ ಅದು ನಿನಗೆ ಸಿಕ್ಕವದು (ಪ್ರಸ. 11:1).

ಅಂತು ಸೈತಾನನ ಎಲ್ಲಾ ದೊರೆತನದಿಂದ ಬಿಡುಗಡೆ ಮಾಡುವುದಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದನು. ಕೊಲೊ 1: 13–17 **"ದೇವರು ನಮ್ಮನ್ನು ಅಂಧಕಾರದ ಧೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನು ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಆತನು ಆದೃಶ್ಯವಾದ ದೇವರ ಪ್ರತಿರೂಪ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನಹೊಂದಿದವನೂ ಆಗಿದ್ದಾನೆ. ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ, ಪ್ರಭುತ್ವಗಳಾಗಲಿ, ಧೊರೆತನಗಳಾಗಲಿ, ಅಧಿಕಾರಗಳಾಗಲಿ, ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆನತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟವು. ಆತನು ಎಲ್ಲಕ್ಕೂ ಮೊದಲು ಇದ್ದವನು. ಆತನು ಸಮಸ್ತಕ್ಕೂ ಆಧಾರ ಭೂತನು."** ಹೀಗೆ ಸಮಸ್ತ ಜನರು ಬಿಡುಗಡೆ ಹೊಂದಿ ಆರಾಧಿಸಬೇಕೆಂದು ಕರ್ತನು ಬಿಡಿಸಿದನು.

ನಿತ್ಯವಾದ ಕೋಪಕ್ಕೆ ನಾವು ಯಾರು ಸಹ ಸಿಲುಕಿ ಬಿದ್ದು ಹೋಗಬಾರದೆಂದು ಆತನು ಬಯಸಿದನು ಆದರೆ ಸೈತಾನನ ವಶಕ್ಕೆ ಸಿಲುಕಿ ನಿಂತಿರುವ ಎಷ್ಟೋ ಜನರನ್ನು ನಾವು ಈ ದಿನಗಳಲ್ಲಿ ನೋಡಬಹುದು. ನಿತ್ಯವಾದ ನರಕ ಇದೆ ಎಂಬುವುದು ಸತ್ಯವಾದ ಸಂಗತಿ ಯಾರೆಲ್ಲಾ ಕ್ರಿಸ್ತನನ್ನು ನಂಬಿ ಆತನ ಮಾರ್ಗದಲ್ಲಿ ನಡೆಯದೆಯೂ, ಆತನ ದೃಷ್ಟಿಗೆ ಸರಿಬೀಳುವುದನ್ನು ಮಾಡದೇ ಇರುತ್ತಾರೋ ಅಂಥವರ ಗತಿಯನ್ನು ಏನೆಂದು ಹೇಳುವುದು. ಸೈತಾನನಿಗೂ ಆತನ ದೂತನಿಗಾಗಿ ಇಟ್ಟಿರುವ ಸ್ಥಳಕ್ಕೆ ನಾವು ಯಾರು ಸಹ ಹೋಗದೇ (ನರಕಕ್ಕೆ, ನಿತ್ಯ ಬೆಂಕಿಗೆ) ನಿತ್ಯ ರಾಜ್ಯದೊಳಗೆ ನಾವು ಪ್ರವೇಶಿಸಬೇಕು ಪ್ರಿಯರೇ.

ನರಕವು ಸತ್ಯವಾದದ್ದು ಆ ಸ್ಥಳಕ್ಕೆ ಹೋಗಬಾರದೆಂಬುವುದೇ ನಮ್ಮ ಕರ್ತನಾದ ಯೇಸು ಕ್ರಿಸ್ತನ ಆಸೆಯಾಗಿದೆ. ಯೊಹಾನ್ನ 3:16 **"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬರಾದರೂ ನಾಶವಾಗದೆ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." "ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳುಪ್ರವಾದಿಯೂ ಕೂಡ ಇದ್ದಾನೆ. ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು."** ಪ್ರಕ 20:10. **"ಆ ಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯು ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೇ ಮರಣವು ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು."** ಪ್ರಕ 20–14,15.

ಹೀಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನು ಬಿಡಿಸುವುದಕ್ಕಾಗಿ ಈ ಲೋಕಕ್ಕೆ ಬಂದನು. ಪ್ರಿಯರೇ ನಿತ್ಯ ನರಕವು ಸತ್ಯ, ನಿತ್ಯ ಯಾತನೆಯು ಸತ್ಯ, ನಿತ್ಯ ಶಿಕ್ಷೆಯೂ ಸತ್ಯವಾದದ್ದು. ಆದರೆ ಇದರಿಂದ ನಿನಗೆ ಬಿಡುಗಡೆ ಹೊಂದಲು ನೀನು ಮನಸ್ಸು ಮಾಡಿ ಬಯಸುವುದಾದರೆ ಆತನು ನಿನ್ನನ್ನು ಬಿಡಿಸುತ್ತಾನೆ. ಈ ಲೋಕದ ಪ್ರತಿಯೊಬ್ಬರಿಗೂ ಸಹ ಜೀವಿಸುತ್ತಿರುವಾಗ ಮಾತ್ರ ಅವಕಾಶ. ಒಂದು ಸಲ ಸತ್ತು ನರಕದ ಯಾತನೆಗೆ, ಶಿಕ್ಷೆಗೆ ಹೋದ ಮೇಲೆ ಅಯ್ಯೋ ನರಕದ ಶಿಕ್ಷೆಯಿಂದ ನನ್ನನ್ನು ಯಾರದರೂ ಬಿಡಿಸಿ ಎಂದು ಕೂಗಿದರೆ ಯಾರು ಸಹ ಬಂದು ಅಲ್ಲಿ ಬಿಡಿಸಲು ಸಾಧ್ಯವಿಲ್ಲ ಈ ಲೋಕದಲ್ಲಿ ಜೀವಿಸುತ್ತಿರುವಾಗ ಮಾತ್ರವೇ ಅದು ಸಾಧ್ಯ. ಪ್ರಿಯರೇ ಈ ದೇವರ ಸ್ವರ ಮಾಸ ಪತ್ರಿಕೆಯು ನಿನ್ನ ಕೈಯಲ್ಲಿದ್ದು ಕೊಂಡು ನನಗೆ ಅನೇಕ ವಿಷಯಗಳಿಂದ ಬಿಡುಗಡೆಬೇಕು ಎಂದು ನೀನು ಕೂಗುತ್ತಿರುವುದಾದರೆ ನಮ್ಮ ಕರ್ತನು ನಂಬಿಗಸ್ತನು ಸತ್ಯವಂತನು ಆತನು ನಿನ್ನ ಎಲ್ಲಾ ಪಾಪದಿಂದ ಬಿಡಿಸಿ ಕಾಯುವಾತನು. 1 ಯೊಹಾ 1: 9 **"ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪಡಿಹರಿಸಿ ನಮ್ಮನ್ನು ಶುದ್ಧೀಮಾಡುವನು."** ಬೇಕಾಗಿರುವ ಎಲ್ಲಾ ಸಂಗತಿಗಳಿಂದ ಆತನು ನಿನ್ನನ್ನು ಬಿಡಿಸುವನು. ನೀನು ಯಾರೇ ಆದರೂ ಯಾವ ಪರಿಸ್ಥಿತಿಯಲ್ಲಿದ್ದರೂ, ಯಾವ ಮೂಲೆಯಲ್ಲಿ ಕುಳಿತುಕೊಂಡು ನನಗೆ ಈ ಎಲ್ಲಾ ವಿಷಯದಿಂದ ಬಿಡುಗಡೆಬೇಕು ನನ್ನನ್ನು ಬಿಡಿಸಲೂ ಯಾರು ಸಹ ಇಲ್ಲವೇ ಎಂದೂ ಹೃದಯ ಬಿಚ್ಚಿ ಕೂಗುವುದಾದರೆ ನಿನ್ನ ಸ್ವರವನ್ನು ಕೇಳಿಸಿಕೊಂಡ ನಿನ್ನ ಸೃಷ್ಟಿ ಕರ್ತನು ಸುಮ್ಮನೇ ಕುಳಿತುಕೊಳ್ಳದೆ ನಿನ್ನ ಬಿಡುಗಡೆಗಾಗಿ ಆತನ ಎರಡು ಕರಗಳನ್ನು ಚಾಚಿ ನಿನ್ನ ಶಾಪದಿಂದಲೂ, ನಿನ್ನ ಕಣ್ಣೀರಿನಿಂದಲೂ, ನಿನ್ನ ನಿತ್ಯವಾದ ವೇದನೆಯಿಂದಲೂ, ನಿನ್ನ ಆತ್ಮೀಕ ಮರಣದಿಂದಲೂ, ನಿನ್ನನ್ನು ನಿತ್ಯವಾಗಿ ಬಿಡಿಸಲು, ಬಿಡುಗಡೆ ಕೊಡಲು ಶಕ್ತನಾದವನು ಕಾರ್ಯ ಮಾಡುತ್ತಾನೆ.

ನಿನ್ನ ಜೀವಿತದಲ್ಲಿ ಎಲ್ಲಾ ಸಂಗತಿಯಿಂದ ಬಿಡಿಸಿ ಕಾಯಲು ಶಕ್ತನಾದ ದೇವರಿಗೆ ಸ್ತೋತ್ರವಾಗಲಿ. ಆಮೆನ್.

ಕರ್ತನು ನಿಮ್ಮನ್ನು ಚಿಯೋನಿನಿಂದ ಪ್ರಸನ್ನಮುಖದಿಂದ ನೋಡಿ ಆಶೀರ್ವದಿಸಲಿ.

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ**

ಜ್ಞಾನವನ್ನು ಪಡೆಯುವವನು ಧನ್ಯನು; ವಿವೇಕವನ್ನು ಸಂಪಾದಿಸುವವನು ಭಾಗ್ಯವಂತನು (ಜ್ಞಾನೋ. 3:13).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಮಹಿಳೆಯರ ಸ್ವರ

ಲೂಕ. 21:19 ನಿಮ್ಮ ಸೈರಣೆಯಿಂದ ನಿಮ್ಮ ಪ್ರಾಣಗಳನ್ನುಪಡಕೊಳ್ಳುವಿರಿ. ಯೋಹಾ. 8:31–32 ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಇಷ್ಟರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವುದು ಎಂದು ಹೇಳಿದನು. ಅ.ಕೃ. 14:22 ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬುದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿ ಎಂದು ಅವರನ್ನು ಧೈರ್ಯಗೊಳಿಸಿದರು. ಅ.ಕೃ. 13:43 ಸಭೆಯು ಮುಗಿದ ತರುವಾಯ ಯೆಹೂದ್ಯರಲ್ಲಿಯೂ ದೇವಭಕ್ತರಾಗಿದ್ದ ಯೆಹೂದ್ಯ ಮತಾವಲಂಭಿಗಳಲ್ಲಿಯೂ ಅನೇಕರು ಪೌಲ ಬಾರ್ನಬರನ್ನು ಹಿಂಬಾಲಿಸಿದರು. ಇವರು ಅವರ ಸಂಗಡ ಮಾತಾಡಿ ದೇವರ ಕೃಪಾಶ್ರಯದಲ್ಲಿ ನೆಲೆಗೊಂಡಿರಬೇಕೆಂದು ಅವರನ್ನು ಪ್ರೋತ್ಸಾಹಪಡಿಸಿದರು. 1 ಕೊರಿ. 15:1–2ರಲ್ಲಿ ಸಹೋದರರೇ ನಾನು ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ ತರುತ್ತೇನೆ. ನೀವು ಅದನ್ನು ಸ್ವೀಕರಿಸಿ ಅದರಲ್ಲಿ ನಿಂತಿದ್ದೀರಿ. ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದೆನೋ ನೀವು ಅದನ್ನು ಗಟ್ಟಿಯಾಗಿ ಹಿಡುಕೊಂಡರೆ ಮತ್ತು ನಿಮ್ಮ ನಂಬಿಕೆಯು ನಿರಾಧಾರವಾಗದ ಪಕ್ಷಕ್ಕೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ. 2 ಕೊರಿ. 13:5ರಲ್ಲಿ ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ ಏನು ಯೇಸುಕ್ರಿಸ್ತನು ನಿಮ್ಮಲ್ಲಿದ್ದಾನೆಂಬುದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವುದಿಲ್ಲವೋ? ಆತನು ನಿಮ್ಮಲ್ಲಿಲ್ಲದಿದ್ದರೇ ನೀವು ಅಯೋಗ್ಯರೇ. ದೇವರಾತ್ಮನುಸಾರವಾಗಿ ಪ್ರಾರಂಭಿಸಿ ಈಗ ಬಾಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದೀರಾ. ಗಲಾ. 3:3 ನಿಮ್ಮಲ್ಲಿ ಯರಾರು ಕರ್ಮಗಳಿಂದ ನೀತಿವಂತರಾಗ ಬೇಕೆಂದಿರುತ್ತಾರೋ ಅವರು ಕ್ರಿಸ್ತನನ್ನು ಆಗಲಿ ಹೋದರು ಕೃಪಾಶ್ರಯದೊಳಗಿಂದ ಬಿದ್ದು ಹೋದರು. ಗಲಾ. 5:4 ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ ದಾಸತ್ವದ ನೊಗದಲ್ಲಿ ತಿರುಗಿ ಸಿಕ್ಕಿಕೊಳ್ಳಬೇಡಿರಿ. ಗಲಾ. 5:1 ಫಿಲಿ. 1:27ರಲ್ಲಿ ಹೇಗೂ ಕ್ರಿಸ್ತನ ಸುವಾರ್ತೆಗೆ ಯೋಗ್ಯರಾಗಿ ನಡೆದುಕೊಳ್ಳಿರಿ. ಆಗ ನಾನು ಬಂದು ನಿಮ್ಮನ್ನು ನೋಡಿದರೂ ಸರಿಯೇ ದೂರದಲ್ಲಿದ್ದು ನಿಮ್ಮ ಸುದ್ಧಿಯನ್ನು ಕೇಳಿದರೂ ಸರಿಯೇ ನೀವು ನಿಮ್ಮ ವಿರೋಧಿಗಳಿಗೆ ಯಾವ ವಿಷಯದಲ್ಲಾದರೂ ಹೆದರದೆ ಒಂದೇ ಆತ್ಮದಲ್ಲಿ ದೃಢವಾಗಿ ನಿಂತು ಸುವಾರ್ತೆಯಲ್ಲಿಟ್ಟ ನಂಬಿಕೆಗೋಸ್ಕರ ಐಕ್ಯಮತ್ಯದಿಂದ ಹೋರಾಡುವವರಾಗಿದ್ದೀರೆಂದು ನಾನು ತಿಳಿದುಕೊಳ್ಳುವೆನು. ಕೊಲೊ. 1:23ರಲ್ಲಿ ನೀವು ಕೇಳಿದಂಥ ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂತಹ ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತಿರುಗಿ ಹೋಗದೆ ಅಸ್ಥಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವುದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವುದು. ಕೊಲೊ. 2:6–7ರಲ್ಲಿ ಆದುದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ. ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ. 1 ತಿಮೊ. 4:1.

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯೂ ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ಯಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಶಿಯಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

ಅವನು ತೆರೆದರೆ ಯಾರೂ ಮುಚ್ಚರು, ಮುಚ್ಚಿದರೆ ಯಾರೂ ತೆರೆಯರು
(ಯೆಶಾ. 22:22)

## ಆರೋಗ್ಯ ಸ್ವರ ಯಾವತ್ತೂ ಸಂತೋಷದಲ್ಲಿರಬೇಕು...

ಆನಂದ, ಶಾಂತಿ, ತೃಪ್ತಿಯ ಭಾಗ ಮನಸ್ಸನ್ನು ಮುದಗೊಳಿಸುವುದರಿಂದ ಮೊಗ ಮತ್ತು ಕಣ್ಣಿನ ಕಾಂತಿ ವರ್ಧಿಸಿ, ಮೊಗದ ಸೌಂದರ್ಯವನ್ನು ಹೆಚ್ಚಿಸುವುದು ಮಾತ್ರವಲ್ಲ, ವ್ಯಕ್ತಿತ್ವದ ಘನತೆಯನ್ನು ಹೆಚ್ಚಿಸಿ, ಪರಿಪೂರ್ಣ ವ್ಯಕ್ತಿತ್ವದ ಸುಂದರ ಅನುಭೂತಿ ನೀಡುತ್ತದೆ.

* ಚಿಂತೆ, ಭಯ, ಉದ್ವೇಗ, ಶೋಕ, ಕ್ರೋಧಗಳು ದೇಹ ಮತ್ತು ಮನಸ್ಸಿನ ರೋಗಗಳಿಗೆ ಮಾತ್ರ ಕಾರಣವಲ್ಲ ಚರ್ಮದ ನೈಜ ಕಾಂತಿ, ಹೊಳಪು ಕಡಿಮೆಯಾಗಿ ಸೌಂದರ್ಯ ಕಳೆಗುಂದುತ್ತದೆ. ಮಾತ್ರವಲ್ಲ ಹಲವು ಬಗೆಯ ಮನೋದೈಹಿಕ, ಚರ್ಮರೋಗಗಳಿಗೂ ಇವು ಕಾರಣವಾಗಿವೆ. ಮಂದಸ್ಮಿತ ವದನಾರವಿಂದ ಸೌಂದರ್ಯಕ್ಕೊಂದು ಸಾಕಾರ ಸಾದೃಶ! ಗಂಟು ಮುಖ, ಸಿಟ್ಟುಸೆಡವಿನ ಮುಖ, ಮುಖದ ಹೆಚ್ಚಿನ ಮಾಂಸಪೇಶಿಗಳನ್ನು ಆಕುಂಚನಗೊಳಿಸಿ ಒತ್ತಡ ಉಂಟು ಮಾಡುತ್ತವೆ. ಮೊಗದಲ್ಲಿ ಮಾಸಿದ ಕಾಂತಿ, ನೆರಿಗೆ ಇತ್ಯಾದಿ. ಇಂಥ ಸಂದರ್ಭಗಳಲ್ಲಿ ಸಾಮಾನ್ಯ. ನಗುಮೊಗ ಮೊಗದ ಎಲ್ಲಾ ಮಾಂಸಪೇಶಿ ಗಳನ್ನೂ ರಿಲ್ಯಾಕ್ಸ್ ಮಾಡುವುದರಿಂದ ನಗುವು ಮೊಗದ ಸೌಂದರ್ಯವರ್ಧನೆಗೊಂದು ಸುಲಭದ ಟಾನಿಕ್ !

* ಇಂದು 'ಧಾವಂತ'ದ ಕಾಲ, ವೇಗದ ಬದುಕು. ಅರಿವಿಲ್ಲದೇ, ಅಥವಾ ಅರಿವಿದ್ದೂ ಅದರ ಪರಿಧಿಯಿಂದ ಸುಲಭವಾಗಿ ಹೊರಬರಲು ಸಾಧ್ಯವಿಲ್ಲದ ಬದುಕು ಇಂದಿನ ಯುಗದ್ದು! ನಮ್ಮ ಪೂರ್ವಜರು ಕಂಡುಕೊಂಡ ದೊಡ್ಡ ಸತ್ಯ 'ಧ್ಯಾನ' ಸಾಧನೆಯಿದ್ದು! ಧ್ಯಾನ ಅಥವಾ ಮೆಡಿಶನ್‌ನಲ್ಲಿ ದೊರೆಯುವ ಆನಂದಕ್ಕೆ" ಎನ್ನುತ್ತಾರೆ. ಧ್ಯಾನ ಸಾಧನೆ ನಿತ್ಯವೂ ಕಡಿಮೆ ಪಕ್ಷ 20 ನಿಮಿಷವಾದರೂ ಮಾಡಿದಲ್ಲಿ ಸೌಂದರ್ಯ ವಿಕಸಿತವಾಗುವುದರೊಂದಿಗೆ ಮುಖ, ಕಣ್ಣುಗಳ ಕಾಂತಿಯೂ ವರ್ಧಿಸುತ್ತದೆ.

* ಸಂಗೀತ, ಸಾಹಿತ್ಯ, ಕಲೆ, ನೃತ್ಯ ಮುಂತಾದ ಹಲವು ಲಲಿತ ಕಲೆಗಳು ಮನ ಸುಂದರಗೊಳಿಸುತ್ತವೆ. ಹೃದಯ ಮತ್ತು ಭಾವನೆಗಳ ಸಂವೇದನೆಗಳ ಸಂವಹನದೊಂದಿಗೆ, ವ್ಯಕ್ತಿತ್ವವೂ ವಿಕಸಿತವಾಗಿ ಪರಿಪೂರ್ಣ ಸುಂದರ ವ್ಯಕ್ತಿತ್ವ ಪಡೆಯಲು ಸಹಕಾರಿ. ಬಹಿರಂತರ ಸೌಂದರ್ಯಗಳ ಸಮ್ಮಿಲನವೇ ನಿಜದ ಸೌಂದರ್ಯ!

**ಮುಪ್ಪು ಮರೆಸಲು ಸೊಪ್ಪು :** ನುಗ್ಗೆಸೊಪ್ಪಿನ ರೊಟ್ಟಿ ಬೇಕಾಗುವ ಸಾಮಗ್ರಿ : ಸಣ್ಣದಾಗಿ ಕತ್ತರಿಸಿದ ನುಗ್ಗೆಸೊಪ್ಪು 4 ಕಪ್, ತುಂಡರಿಸಿದ ನೀರುಳ್ಳಿ 2, ಗೋಧಿಹುಡಿ ಹಾಗೂ ಅಕ್ಕಿಹುಡಿ ತಲಾ ಒಂದೊಂದು ಕಪ್(ಬೇಕಿದ್ದರೆ ರಾಗಿ ಹುಡಿಯೂ ಸೇರಿಸಬಹುದು). ತೆಂಗಿನತುರಿ 1 ಕಪ್, ಕತ್ತರಿಸಿದ ಕೊತ್ತಂಬರಿಸೊಪ್ಪು, ಕರಿಬೇವು ಹಾಗೂ ಶುಂಠಿ, ರುಚಿಗೆ ತಕ್ಕಷ್ಟು ಉಪ್ಪು, ಮೆಣಸಿನಹುಡಿ, ಸಕ್ಕರೆ, 2 ಚಮಚ ಜೀರಿಗೆ.

**ತಯಾರಿಸುವ ವಿಧಾನ :** ಎಲ್ಲವನ್ನೂ ನೀರು ಹಾಕಿ ರೊಟ್ಟಿಹಿಟ್ಟಿನ ಹದಕ್ಕೆ ಕಲಸಿ ಬಾಳೆಲೆ ಅಥವಾ ಶೀಟಲ್ಲಿ ರೊಟ್ಟಿತಟ್ಟಿ ಕಾದ ಕಾವಲಿಗೆಯಲ್ಲಿ ತುಪ್ಪಹಾಕಿ ಎರಡೂ ಬದಿ ಹೊಂಬಣ್ಣಬರುವ ತನಕ ಬೇಯಿಸಿ, ಬೆಣ್ಣೆಯೊಂದಿಗೆ ತಿನ್ನಲು ರುಚಿಯಾಗಿರುತ್ತದೆ. ನುಗ್ಗೆಸೊಪ್ಪು ಬಳಸಿ ದೋಸೆಯೂ ಮಾಡಬಹುದು. ಹೇರಳವಾಗಿ ಕಬ್ಬಿಣದಂಶ ಇರುವುದಲ್ಲದೆ ಎಲ್ಲಾ ಕಾಲದಲ್ಲೂ ಲಭ್ಯವಿರುವುದರಿಂದ ಅನುಕೂಲ.

### ಒಬ್ಬಟ್ಟು

ಸವಿರುಚಿ : ಸಾಮಗ್ರಿ : ತೆಂಗಿನ ತುರಿ –1, ಸಕ್ಕರೆ ಅಥವಾ ಬೆಲ್ಲ –1ಪಾವು, ಚಿರೋಟಿ ರವೆ–1 ಪಾವು, ರಿಫೈನ್ಡ್‌ಆಯಿಲ್ ▯ ಕಾಲು ಕಪ್

ವಿಧಾನ : ತೆಂಗಿನ ತುರಿಗೆ ಬೆಲ್ಲ ಅಥವಾ ಸಕ್ಕರೆ ಬೆರೆಸಿ, ಸಣ್ಣ ಉರಿಯಲ್ಲಿ ಕೆದಕುತ್ತಾ ಹೂರಣ ಮಾಡಿಟ್ಟುಕೊಳ್ಳಿ. ಚಿರೋಟಿ ರವೆಯ ಕಣಕ ತಯಾರಿಸಿ ಎಣ್ಣೆಯಲ್ಲಿ ನಾದಿ ಸಿದ್ಧಮಾಡಿಕೊಳ್ಳಿ, ಕಣಕ 1ತಾಸು ನೆನೆಯಬೇಕು. ನಂತರ ಬಾಳೆ ಎಲೆಯ ಮೇಲೆ ಕಣಕ ತಟ್ಟಿ ಅದರ ಮೇಲೆ ಹೂರಣ ಇಟ್ಟು ಉಂಡೆ ಮಾಡಿ. ಗುಂಡಗೆ ತಟ್ಟಿ, ನಿಧಾನವಾಗಿ ತವ ಮೇಲೆ ಸಣ್ಣ ಉರಿಯಲ್ಲಿ ಬೇಯಿಸಿ ತೆಗೆಯಿರಿ.

(ಈ ಅಳತೆಗೆ ಸುಮಾರು 12 ಒಬ್ಬಟ್ಟುಗಳನ್ನು ತಯಾರಿಸಬಹುದು).

– ಸಂಗ್ರಹ.

ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು (ಮತ್ತಾ. 10:20).

# ಜಾಹಿರಾತು


ನಿಮಗೆ ಶಾಲೆಯ ಯೂನಿಫಾರಂ ಮತ್ತು ದೇವರ ವಾಕ್ಯದ ಟಿ-ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**

## ಬೇಕಾಗಿದ್ದಾರೆ

ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ Accountant ಬೇಕಾಗಿದ್ದಾರೆ

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0820–2002781, 9902334941.**

## ಬೇಕಾಗಿದ್ದಾರೆ

24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ. ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು. ಪ್ರಾರ್ಥನೆ ಮಾಡಲು ಇಚ್ಛಿಸುವವರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941.**

ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781.**


ಬಡವರಿಗೆ ದಾನಮಾಡುವವನು ಕೊರತೆಪಡನು

(ಜ್ಞಾನೋ. 28:27).

## ಈ ವಾಕ್ಯಗಳು ಎಲ್ಲಿವೆ?

ಮಕ್ಕಳ ಸ್ವರ

1. ಫಿನೇಹಾಸನು ಯಾರ ಮಗನು ?
2. ಗೊಲ್ಯಾತನನ್ನು ಸಂಹರಿಸಿದ್ದು ಯಾರು ?
3. ಅಪೋಸ್ತಲನಾದ ಪೌಲನ ಮನೆ ಹೆಸರೇನು?
4. ಸಂಸೋನನ ಚರಿತ್ರೆಯು ಸತ್ಯವೇದದ ಯಾವ ಪುಸ್ತಕದಲ್ಲಿ ಇದೆ ? ಅಥವಾ ಲಿಖಿತವಾಗಿದೆ?
5. ದೇವರು ಸೂರ್ಯ ಚಂದ್ರ ನಕ್ಷತ್ರಗಳನ್ನು ಎಷ್ಟನೇ ದಿನದಲ್ಲಿ ಉಂಟುಮಾಡಿದನು?
6. ಯೇಸುವನ್ನು ಶಿಲುಬೆಗೇರಿಸಿದ ನಂತರ ಆತನ ದೇಹವನ್ನು ಕೊಡಬೇಕೆಂದು ಕೇಳಿದ್ದು ಯಾರು ?
7. ರಕ್ತಭೇದಿಯಿಂದ ಪೀಡಿತನಾಗಿದ್ದ ಒಬ್ಬನನ್ನು ಪೌಲನು ಸ್ವಸ್ಥಮಾಡಿದನು ಆತನು ಯಾರು ?
8. ಗೊಲ್ಯಾತನನ್ನು ಕೊಂದ ದಾವೀದನು ಯಾರ ಮಗನು?
9. ಎಲಿಯೇಜರನ ತಂದೆ ಯಾರು ?
10. ಸಂಸೋನನನ್ನು ಬಲಹೀನನನ್ನಾಗಿ ಮಾರ್ಪಡಿಸಿದ ಸ್ತ್ರೀ ಯಾರು ?

---

### ಜುಲೈ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1) ಮರಗೆಲಸ ಅಥವಾ ಬಡಗಿ ಕೆಲಸ
2) ತಿಬೇರಿಯಾ ಅಥವಾ ಗಲಿಲಾಯ (ಮತ್ತಾ. 14:26;ಯೋಹಾ. 21:1).
3) ಕುರುಬನ ಕೆಲಸ (ಆದಿ. 4:2).
4) ದಾನಿಯೇಲನನ್ನು (ದಾನಿ. 6:16).
5) ಕೆಟೂರಳು (ಆದಿ. 25:1).
6) ಜೆಬೆದಾಯನು (ಮಾರ್ಕ. 1:19).
7) ಮೂರನೇ ದಿನದಲ್ಲಿ (ಆದಿ. 1:11).
8) ನೋಹನೊಂದಿಗೆ (ಆದಿ. 9:16–17).
9) ಜಕರೀಯನು (ಲೂಕ. 1:67).
10) ಲಾಬಾನ (ಆದಿ. 29:22–30).

---

## ಡಿಜಿಎಮ್ ಬೇತೇಲ್ ಅಂಕಣ

- **ವಿಶ್ವಾಸದಮನೆಯಲ್ಲಿ ಆಶ್ರಯ ಹಾಗೂ ಆರೈಕೆ ಹೊಂದಿ ಗುಣಮುಖರಾದ ಒರಿಸ್ಸಾ ಹಾಗೂ ಬಿಹಾರ್ ಮೂಲದ ಐದು ಮಂದಿಯನ್ನು ವಿಶ್ವಾಸದಮನೆಯ ಸಿಬ್ಬಂದಿಯವರು ಕರೆದುಕೊಂಡು ಹೋಗಿ ಅವರವರ ಮನೆಗೆ ತಲುಪಿಸಿದ್ದಾರೆ.**

ನನ್ನ ಧರ್ಮವನ್ನು ಹತ್ತಿರಕ್ಕೆ ಬರಮಾಡುವೆನು, ಅದು ಇನ್ನು ದೂರವಾಗಿರದು,
ನನ್ನ ರಕ್ಷಣೆಯು ತಡವಾಗದು (ಯೆಶಾ. 46:13).